
ಕೊರವಂಜಿ



ಸಂಪಾದಕರು :

ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಶೇವಣ್ಣ
ಶ್ರೀ|| ಯಜ್ಞಪಶು
ಶ್ರೀ|| ಪ್ಲೀಡರ್
ಶ್ರೀ|| ನ. ಶೇ. ಲಕ್ಷ್ಮಣರಾವ್
ಶ್ರೀ|| ಎ. ಎಸ್. ರಾಮಕೃಷ್ಣ
ಶ್ರೀಮತಿ ಟಿ. ಸುನಂದಮ್ಮ
ಶ್ರೀ|| ಹಾ. ರಾ.
ಶ್ರೀ|| ಕಾಮತ್
ಶ್ರೀ|| ತೋ. ಸ್ವಾ.
ಶ್ರೀಮತಿ ನಾ. ಕಸ್ತೂರಿ

ಇತ್ಯಾದಿ, ಇತ್ಯಾದಿ.


ತಿಳಿನಗೆಯ ಮಾಸಪತ್ರಿಕೆ




ಬಾರ್ಲೀ ನೀರನ್ನೂ, ಗಂಜಿಯನ್ನೂ
ಈ ರೀತಿ ಮಾಡುವುದು ಸುಲಭ
PURITY
INDIAN BARLEY
ಪ್ಯೂರಿಟೀ
ಬಾರ್ಲೀ



ಪಂಡಿತ ಡಿ. ಗೋಪಾಲಾಚಾರ್ಲುರವರ
ಜೀವಾಮೃತಂ
ಸ್ವರ್ಣೋತ್ಸವವು
1898 - 1948
VAIDYARATNA PANDIT D. GOPALACHARLU
JEEVAMRUTHAM NECTOR FOR LIFE
AYURVE
JEEVAMRUTHAM
NERVINE TONIC
ಆರೋಗ್ಯಕ್ಕೆ
ಬಲವೃದ್ಧಿಗೆ
ಮದ್ರಾಸು 17.


ನೀವು ಈ ಗುರು
ತನ್ನು ನೋಡಿ
ದೊಡನೆಯೇ
ನಿಮಗೆ ಅತ್ಯು
ತ್ತಮವಾದುದು
ದೊರೆತಿದೆಯೆಂದು
ತಿಳಿಯುವಿರಿ.
M
VOP



ಸಂಪುಟ ೧೦ | ಜನವರಿ ೧೯೫೧ | ಸಂಚಿಕೆ ೧೦

ಕೊರವಂಜಿಯು ಇಂದು ಅಳುಮೂಂಜಿಯಾಗಿದ್ದಾಳೆ—

ಸಮಾಜ ಹಾಗೂ ಸರ್ಕಾರದಲ್ಲಿ, ವಿಚಾರ ಪೂರಿತವಾದರೂ ವಿವೇಕ ರಹಿತ ಪರಿಸ್ಥಿತಿ ಒದಗಿದರೆ ಅದನ್ನು 'ವಂಡರ ಗಣ್ಣು' ದೃಷ್ಟಿಯಲ್ಲಿ ನೋಡಿ ನಗುತ್ತಿದ್ದಳು ಕೊರವಂಜಿ—ಹಾಗೆ ಮಾಡಿದರೆ ಎರಡೂ ಕಡೆಯ ದೃಷ್ಟಿ ಒದಗಿ ಸಮದೃಷ್ಟಿ ಬರಲೆಂದು.

ಆ ಸಮದೃಷ್ಟಿಯೇ ಮೂರ್ತಿವೆತ್ತಂತಿದ್ದ ಸರದಾರ್ ವಲ್ಲಭಭಾಯಿ ಪಟೇಲರು ಡಿಸೆಂಬರ ಹದಿನೈದರಲ್ಲಿ ತಮ್ಮ ಗುರು ಮಹಾತ್ಮಾಜೀಯವರ ಸಾನ್ನಿಧ್ಯವನ್ನು ಸೇರಿದರು.

ಏರು ಪೇರುಗಳ ಈ ಕ್ಲಿಷ್ಟಕಾಲದಲ್ಲಿ ಭಾರತಕ್ಕೆ ಸರ್ದಾರರು ಅತ್ಯವಶ್ಯಕವಾಗಿದ್ದರು. ಸಮದೃಷ್ಟಿಯವರು ಬೇಕೆ ಬೇಕಿದ್ದರು. ಅಂತಹವರನ್ನು ಕಳೆದುಕೊಂಡು ಕೊರವಂಜಿ ಅಳುಮೂಂಜಿಯಾಗಿದ್ದಾಳೆ. ಆದರೆ ಆ ಸಮದೃಷ್ಟಿಯಿಂದಲೇ ಧೈರ್ಯ ತಂದುಕೊಂಡು—"ಆತನ ಕಾರ್ಯ ನಿಷ್ಠುರತೆ-ಸಮದೃಷ್ಟಿ-ಮಿಕ್ಕೆಲ್ಲಾ ರಾಜಕಾರಣಿಗಳಿಗೆ ಭಗವಂತನು ಅನುಗ್ರಹಿಸಲಿ ಎಂದು ಆ ಸರ್ವಶಕ್ತನಲ್ಲಿ ದೈನ್ಯದಿಂದ ಪ್ರಾರ್ಥಿಸುತ್ತಾಳೆ.

" ಚಿರಂಜೀವಿಯಾಗಲಿ ಸರ್ದಾರರ ಸಮದೃಷ್ಟಿ "

ಕುಹಕಿಡಿಗಳು

ಬಂಗಾಳಾ, ಮದ್ರಾಸು, ಮತ್ತಿತರ ಪ್ರಾಂತ್ಯಗಳಲ್ಲಿನ ಮಂತ್ರಿಮಂಡಳದ ಬಿಕ್ಕಟ್ಟು ನೋಡಿ ಸರದಾರ್ ಪಟೇಲರು ದಿವಂಗತರಾದರು ಎನ್ನಲು ಸಾಕಷ್ಟು ಕಾರಣಗಳಿಲ್ಲವಂತೆ.

* * *

ದೇಶೀಯ ರಾಜರುಗಳೆಲ್ಲಾ ಸೇರಿ ಸರದಾರ ಸ್ಮಾರಕ ನಿಧಿಗೆ ಕೋಟ್ಯಾಂತರ ರೂಪಾಯಿ ಕೊಡಲೇ ಬೇಕು—ರಾಜ್ಯಗಳನ್ನು ಒಟ್ಟುಗೂಡಿಸಿದರೂ ರಾಜರುಗಳ ಹೊಟ್ಟೇಮೇಲೆ ಹೊಡೆಯಲಿಲ್ಲ ಎಂದೊಬ್ಬರು ಪತ್ರ ಬರೆದಿದ್ದಾರಂತೆ.

* * * *

ಇಂಡಿಯನ್ ಸೈನ್ಸ್ ಕಾಂಗ್ರೆಸಿನ ಅಧ್ಯಕ್ಷರನ್ನು ೧೨ ಜತೆ ಎತ್ತಿನ ಗಾಡಿಯಲ್ಲಿ ಮೆರವಣಿಗೆ ಮಾಡಲಿಲ್ಲವಂತೆ.

* * * *

ಇಂಡಿಯನ್ ಸೈನ್ಸ್ ಕಾಂಗ್ರೇಸಿಗೆ ಜನರು ಗುಂಪು ಗುಂಪಾಗಿ ಬರಲಿ ಎನ್ನುವುದಕ್ಕೋಸ್ಕರ ಪಂಡಿತ ನೆಹ್ರೂ ಅವರನ್ನೂ ಶ್ರೀಮತಿ ಸುಬ್ಬಲಕ್ಷ್ಮಿಯವರನ್ನೂ ಆಹ್ವಾನಿಸಿದ್ದಾರೆ ಎನ್ನುವುದು ಶುದ್ಧ ಕುಹಕ.

* * * *

"ಹೊಟ್ಟೇ ನೋವಿನಿಂದ ನರಳುತ್ತಿದ್ದಾಗ ನಮ್ಮ ಮಗು ತನ್ನ ಹತ್ತಿರ ಇದ್ದ ಪೆಪ್ಪರಮೆಂಟನ್ನು ಕೊಡ್ತು. ಅದನ್ನು ತಿಂದೆ ಹೊಟ್ಟೆ ನೋವು ಹೋಯಿತು" (ತಂದೆಯ ಹೇಳಿಕೆ)

—ಭಲಾ! ನೇಪಾಳ ಬಾಬ!

* * * *

ಪೌರಸಭಾ ಚುನಾವಣೇಲಿ ಓಟುದಾರರಿಗಿಂತ ಹಾಗೂ ಸ್ಪರ್ಧಿಗಳಿಗಿಂತ ದಳ್ಳಾಳಿಗಳೇ ಬುದ್ಧಿವಂತರು ಎಂದು ಯಾರೋ ಕುಹಕ ಆಡಿದರಂತೆ.

ಉರಿಗಾಳು

ಗಾಂಧಿ ಸ್ಮಾರಕ ನಿಧಿ ವಸೂಲಿಗಾಗಿ ಕೊಟ್ಟಿದ್ದ ರಸೀದಿ ಪುಸ್ತಕಗಳೂ ಪೂರ್ತಿ ವಾಪಸ್ ಬರುವತನಕ ಸರ್ದಾರ್ ಸ್ಮಾರಕ ನಿಧಿ ವಸೂಲಿ ಪ್ರಾರಂಭಿಸಲು ಸಮ್ಮತಿಸಕೂಡದು (ಹೇಳಿಕೆ) ಹಾಗಾದರೆ, ಎರಡನೆಯದು ಪ್ರಾರಂಭವಾಗುವಂತೆಯೇ ಇಲ್ಲವಲ್ಲಾ....

* * *

ಬಿಹಾರಿನ ಉಣ್ಣೆ ತಯಾರಿಕಾಲಯದವರು ತಮ್ಮ ಸಂಸ್ಥೆಗಳನ್ನು ಜನವರಿ ೨೦ನೇ ತಾ|| ನಿಂದ ಮುಚ್ಚಲು ನಿರ್ಧರಿಸಿದ್ದಾರೆ (ಸುದ್ದಿ) ಎಣ್ಣೆ ಬಂದಾಗ, ಮುಚ್ಚಬೇಕಾದದ್ದು ಕಣ್ಣುಗಳನ್ನಲ್ಲವೆ?

* * *

ಭಾಷಣ ಮಾಡುವ ಮುನ್ನ ಮಂತ್ರಿಗಳು ರಾಜೇಂದ್ರಪ್ರಸಾದರ ಭಾವಚಿತ್ರವನ್ನು ಅನಾವರಣ ಮಾಡುವರು (ವರದಿ) ಅಂದಮೇಲೆ ಅವರನ್ನು ಕ್ಷಮಿಸಬಹುದು.

* * *

ಸಹ ವಿದ್ಯಾಭ್ಯಾಸವನ್ನು ಒಪ್ಪುತ್ತೀರೋ ಎಂಬ ಪ್ರಶ್ನೆಗೆ ಬೊಂಬಾಯಿ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರೂ ಲಕ್ನೋ ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳೂ ಒಪ್ಪಿದರಂತೆ........ಅವೆರಡೂ ಸಂಸ್ಥೆಗಳನ್ನೂ ಒಟ್ಟು ಗೂಡಿಸುವ ಯೋಜನೆ ಎಂದು ಫಲಕಾರಿಯಾಗುತ್ತದೋ, ನೋಡಬೇಕು.

* * *

ಸಕ್ಕರೆಯನ್ನು ರೇಷನ್ ಕಾರ್ಡುಗಳ ಮೇರೆಗೆ ಡಿಪೋಗಳಲ್ಲೂ ಕೊಂಡುಕೊಳ್ಳಬಹುದಂತೆ; ಅಂಗಡಿಗಳಲ್ಲೂ ಕೊಂಡುಕೊಳ್ಳಬಹುದಂತೆ. ಇನ್ನು ಮೇಲೆ ...ಈಗ ಅಕ್ಕಿಯನ್ನೂ ನಾವು ಹೀಗೆ ಪಡೆಯುತ್ತಿದೇವೆ.

* * *

ಭಾರತ ಸ್ತ್ರೀಯರ ಹಾಕಿ ಟೀಮೊಂದು ಮಾರ್ಚಿ ತಿಂಗಳಲ್ಲಿ ಇಂಗ್ಲೆಂಡ್ ಮತ್ತು ಹಾಲೆಂಡ್‌ಗಳಲ್ಲಿ ಪಂದ್ಯಗಳನ್ನಾಡಲು ತೆರಳಿದೆ (ಸುದ್ದಿ) ಸದ್ಯಃ, ಹಲವು ಸಂಸಾರಗಳು ಇಲ್ಲಿ ಅವರು ಬರುವ ತನಕ ನೆಮ್ಮದಿಯಾಗಿರುತ್ತವೆ.

* * *

ಪ್ರೊಫೆಸರ್.........ರಿಗೆ ಅಮೇರಿಕದ ವೈಕಿಂಗ್ ನಿಧಿಯುವರು ಒಂದು ವಿದ್ಯಾರ್ಥಿ ವೇತನವನ್ನು ದಯಪಾಲಿಸಿದ್ದಾರೆ (ಸುದ್ದಿ) ಇನ್ನೂ ಅನೇಕ ಪ್ರೊಫೆಸರುಗಳಿಗೆ ಹೀಗೆ ವೇತನ ಕೊಟ್ಟು, ಮತ್ತೆ ಓದಿಸಿದರೆ ಒಳ್ಳೆಯದು.

* * *

ಸರ್ವ ರೋಗ ಶಮನವೆಂದು ಹೇಳಲಾದ ಮರದ ತೊಗಟೆಯನ್ನು ಪಡೆಯಲು ಜಾತ್ರೆ ಹೋದ ಜನರ ಪೈಕಿ ಸಾವಿರಾರು ಜನ ಕಾಲರಾ ಪೀಡಿತರಾಗಿ ಪ್ರಾಣ ನೀಗಿದರು....ಉಳಿದವರಿಗೆ ಸರ್ವ ರೋಗ ಶಮನ ಮುಹೂರ್ತ ಇನ್ನೂ ಬಂದಿಲ್ಲವೆಂದು ತೋರುತ್ತದೆ.

* * *

ಮುಂಬೈ ಪೋಲೀಸರು ಹೋಟಲೊಂದರ ರೂಮನ್ನು ಶೋಧಿಸಿ ೧೦ ಲಕ್ಷ ರೂಪಾಯಿ ಬೆಲೆ ಬಾಳುವ ಚಿನ್ನವನ್ನೂ ನಾಲ್ಕು ಲಕ್ಷ ರೂಪಾಯಿಯ ನೋಟುಗಳನ್ನೂ ಸ್ವಾಧೀನಪಡಿಸಿಕೊಂಡಿದ್ದಾರೆ (ಬೊಂಬಾಯಿ ಸುದ್ದಿ) ಹೋಟಲು ಕೈಗಾರಿಕೆ ಎಷ್ಟು ಲಾಭದಾಯಕ, ಎಂದು ಇದರಿಂದ ತಿಳಿದ ಹಾಗಾಯಿತಲ್ಲವೆ?

* * *

ನಾಲ್ಕು ತಿಂಗಳಿಂದ ಈ ಊರಿನ ಶಾಲೆಗೆ ಮಾಸ್ತರೇ ನೇಮಕವಾಗಿರಲಿಲ್ಲ; ಮೊನ್ನೆ, ಈ ಕೊರತೆ ಪರಿಹಾರವಾಯಿತು; ಮಾಸ್ತರು ಒಬ್ಬರು ಬಂದು ಶಾಲಾ ಬಾಗಿಲನ್ನು ತೆರೆದರು (ವರದಿ) ಇನ್ನು, ವಿದ್ಯಾರ್ಥಿಗಳಿಗೆ ಮುಷ್ಕರ ಹೂಡಲು ಅನುಕೂಲವಾಯಿತು.

* * *

ಭೂ-ಸವೆತ-ನಿರೋಧ-ಶಾಸನವೊಂದನ್ನು ಕೇಂದ್ರ ಸರ್ಕಾರ ಜಾರಿ ಮಾಡಲಿದೆ. (ದೆಹಲಿ ಸುದ್ದಿ) ಹಾಗಾದರೆ, ತೂಕವಾದ ಆಸಾಮಿಗಳು ಅತ್ತಿತ್ತ ಓಡಾಡುವಂತೆಯೇ ಇಲ್ಲ!

---o---

ಕೊರವಾವಲೋಕನ

ಅಂಗಾರ ಅಕ್ಷತೆ ಇಟ್ಟುಕೊಂಡುಬಂದಿದ್ದ ಕೊರವ ಆ ಸಾಯಂಕಾಲ. ಇವನಿಗೇನು ಬಂತು ಇದ್ದಕ್ಕಿದ್ದಹಾಗೆ ಅಂತ ನೋಡೋ ಹೊತ್ತಿಗೆ ಅವನೇ ಎಲೆ ಅಡಿಕೆ ರಂಗಿನ ಬಾಯ್ಬಿಟ್ಟ,

"ನಿಮಗೆಲ್ಲಾ ಆಶ್ಚರ್ಯ! ಅಲ್ಲವೇ! ನಾನು ಹೀಗೆ ಹಣೇಗೆ ಅಲಂಕಾರ ಮಾಡಿಕೊಂಡು ತುಳಸೀ ದಳ ಕಿವೀಗೆ ಸಿಕ್ಕಿಸಿಕೊಂಡು ಇಲ್ಲಿಗೆ ಬಂದಿದ್ದು. ಕಾರಣ ಇಷ್ಟೇ ನಿನ್ನೆ ಆಯುರ್ವೇದ ಶಾಸ್ತ್ರಜ್ಞರೊಬ್ಬರು ಒಂದು ಭಾಷಣ ಮಾಡಿದರು. ಹೈಡ್ರೋಜನ್ ಬಾಂಬ್ ಬಿದ್ದರೆ ಅದರ ಪರಿಹಾರದ ಮಾರ್ಗ ವನ್ನೆಲ್ಲಾ ಅಥರ್ವಣ ವೇದದಲ್ಲಿ ಬರೆದಿದ್ದಾರೆ ಅಂತ. ಆದರೆ ಅರ್ಥಮಾಡಿ ಕೊಳ್ಳೋದು ಕಷ್ಟ ಅಂತ. ಅದಕ್ಕೇ ನಾನು ಅರ್ಥವಾಗಲೀ ಆಗದೇ ಇರಲಿ ಹಳೇ ಸಂಪ್ರದಾಯ ಬಿಡಬಾರದು ಅಂತ ಶುರು ಹಚ್ಚೇನಿ" ಅಂದ.

ಇದರ ಅರ್ಥ ಹೇಗೂ ಇರಲಿ, ಅನರ್ಥ ಖಂಡಿತ ಅಂದೇಬಿಟ್ಟೆ.

* * *

ರಂಗು ನಗುತ ನಗುತ ಇದ್ದ, ಕ್ಲಬ್ಬಿಗೆ ಬಂದಾಗ. ಸಿಕ್ಕಿದವರಿಗೆಲ್ಲಾ ಆದರದ ಆತಿಥ್ಯ ಮಾಡುತ್ತಿದ್ದ. ಸಾಮಾನ್ಯವಾಗಿ ಕಂಡವರು ಸಿಕ್ಕರೆ ಕಾಣದ ಹಾಗೆ ಸೋಫಾದಲ್ಲಿ ಅವಿತುಕೊಳ್ಳೋ ಅಭ್ಯಾಸ. ಇದೇಕೆ ಹೀಗೆ ಇವತ್ತು? ಅಲ್ಲದೆ ಚುನಾವಣೇಲಿ ಠೇವಣಾತಿ ಬೇರೆ ಕಳೆದುಕೊಂಡಿದ್ದಾನೆ ಎಂದು ನನಗೆ ಯೋಚನೆ. ಅಷ್ಟುಹೊತ್ತಿಗೆ ನನ್ನ ಹತ್ತಿರವೇ ಬಂದ. ಬಲು ಆಪ್ತನಂತೆ ಮಾತನಾಡಿ ಹನ್ನೆರಡಾಣೆ 'ಸಿಗಾರ್' ಬೇರೆ ಕೊಟ್ಟ. ಗಾಳಿ ಮೇಲೆ ತೇಲಿ ಕೊಂಡೇ ಹೊರಟು ಹೋದ.

* * *

ಕೊರವನ ಮೇಜಿನ ಹತ್ತಿರ ಹೋದೆ. ನೋಡಿದೆಯಾ? ಎಂದು ಕಣ್ಣು ಸನ್ನೆ ಮಾಡಿದೆ. ಆತ ಟೋಪಿ ತೆಗೆದು ಪತ್ರಿಕೇಗೆ ಹಾಕಿ ಹೇಳಿದ.

"ಹೆಂಡತಿ ಜಂಭಕ್ಕೋಸ್ಕರ ಇವನೂ ಚುನಾವಣೇಗೆ ನಿಂತ. ಗೆಲ್ಲಬೇಕಿದ್ದರೆ ನಾಲ್ಕು ಸಕಾರ ಖರ್ಚು ಆಗುತ್ತಿತ್ತು. ಈಗ ಠೇವಣಾತಿ ಕೇವಲ ನೂರೇ ರೂಪಾಯಲ್ಲಿ ಪರ್ಯ್ಯವಸಾನ. ಅದಕ್ಕೇ ಹಾಗೆ ಹಿರಿ ಹಿರಿ ಹಿಗ್ಗುತ್ತಾ ಇದ್ದಾನೆ" ಎಂದು.

* * *

ಕನ್ನಡ ಪ್ರೇಮಿ ಕೊರವ. ವಾಚನ ಕೊಟಡಿಯಿಂದ ಹೊರಬಿದ್ದಾಗ ಎಲ್ಲಿಗಯ್ಯಾ? ಎಂದೆ.

ಅಬೂವಿನಿಂದ ಬರಾಮಾಕ್ಕೆ ಎಂದ.

ಸತ್ತರೆ ಸಾಕು

(ಹಾಟೂಳಿ)

ರಂಕಲ್ಲೈ ಗ್ರಾಮದಲ್ಲಿ ಸರ್ವ ರೋಗ ಶಮನಾರ್ಥವಾಗಿ ತೊಗಟೆ ಹಂಚಿದ ಹುಡುಗನ ವಿಷಯ, ಕುಮಾರ ಮಂಗಲಂ ರೈಲ್ವೇ ಸ್ಟೇಷನ್ ಮೇಷ್ಟ್ರು ಇದ್ದ ಕ್ಕಿದ್ದಹಾಗೆ ವಿಭೂತಿ ಹಂಚಿ ಆಸ್ಪತ್ರೆಗಳನ್ನೆಲ್ಲ ಮುಚ್ಚಿಸಲು ಯತ್ನಿಸಿದ್ದು— ಇವೆರಡನ್ನೂ ಓದಿದಾಗ ನಮ್ಮೂರಲ್ಲಿ ನಡೆದ ಒಂದು ಮಹಾ ಸನ್ನಿವೇಶವನ್ನು ಕೊರವಂಜಿ ವಾಚಕರಲ್ಲಿ ಬಿನ್ನವಿಸಿಕೊಳ್ಳೋಣವೆನಿಸುತ್ತದೆ.

ನಮ್ಮೂರು ಸಣ್ಣದಾದರೂ, ಹೆಸರುವಾಸಿ. ಅನ್ನದಹಳ್ಳಿ, ಅಂತ ಊರ ಮುಂದಿನ ಬೋರ್ಡಿನಲ್ಲಿ ಬರೆದಿದೆ. ಹಿಂದೆ ಮರಾಠೆಯರಿಗೂ ಮೈಸೂರಿನ ವರಿಗೂ ನಾಲ್ಕು ಲಡಾಯಿಗಳು ನಡೆದಾಗ, ಉಭಯ ಸೈನ್ಯದವರಿಗೂ ನಮ್ಮ ಹಿರಿಯರು ಅನ್ನ ಒದಗಿಸಿದರಂತೆ. ಅದಕ್ಕಾಗಿ ಇವತ್ತಿಗೂ ನಾವು ಈ ಹೆಸರನ್ನು ಹೊತ್ತು ತಿರುಗಬೇಕಾಗಿದೆ, ಇರಲಿ. ಅದ್ಯ ಕಥಾ ಪ್ರಸಂಗದ ಕಡೆ ಗಮನಿಸೋಣ.

ಹಿರಿಯರ ಅನ್ನದಾನ ಪ್ರಭಾವದಿಂದ, ನಮ್ಮೂರಲ್ಲಿ ಒಂದು ಹೆಣ್ಣು ಮಗು ಹುಟ್ಟಿತು. ಅವರ ಆಶೀರ್ವಾದ ಬಲದಿಂದ, ಬೆಳೆಯಿತು. ತಾಯಿ ತಂದೆ ಯರ ಪೋಷಣೆಯಿಂದಾಗಿ ಕೊರಗಿತು; ಅಕ್ಕ ಪಕ್ಕದವರ ಲಾಲನೆಯಿಂದಾಗಿ, ಬದುಕಿತು. ಅಂತು ಇಂತು ಅನಕ್ಷರಳಾಗಿಯೇ ಆಂಜನೇಯ ಗುಡಿ ಎದುರಿಗಿನ ಮನೆಯಲ್ಲಿ, ಅಂತು ಆರನೆಯ ವಯಸ್ಸನ್ನು ಕಂಡಳು.

ಆಗ, ಒಂದು ಅದ್ಭುತ ನಡೆಯಿತು. ಇದ್ದಕ್ಕಿದ್ದಹಾಗೆ, ಹುಡುಗಿ ಪಟೇಲರ ಮನೆಗೆ ನುಗ್ಗಿ, ಅಲ್ಲಿ ಜ್ವರ ಹಿಡಿದು ಮಲಗಿದ್ದ ಪಟೇಲರ ಅಜ್ಜಿಯನ್ನು ನೋಡಿ, "ನಿನಗೆ ಜ್ವರ ವಾಸಿಯಾಗುವುದಿಲ್ಲ; ಏಕೆ ಸುಮ್ಮನೆ ಕಷಾಯ ಕುಡೀತೀಯಾ, ಮುದುಕಿ?" ಅಂದಳು. ಅವಳು ಹೇಳಿದ್ದಕ್ಕೆ ಸರಿಯಾಗಿ, ಆಕೆ ಆ ತಿಂಗಳಲ್ಲೇ ಹರಹರ ಅಂದಳು. ಪಟೇಲರಿಗೆ ಕಷಾಯದ ಖರ್ಚು ಉಳಿಯಿತು.

ಎಲಾ, ಹುಡುಗಿ!—ಎಂಥ ದೈವೀಕ ಶಕ್ತಿ—ಏನು ಮಹಾತ್ಮೆ ಅಂತ ನಾವೆಲ್ಲ ಮೂಗಿನ ಮೇಲೆ ಬೆರಳಿಟ್ಟೆವು. ಸಂತೆ, ಜಾತ್ರೆ, ಮದುವೆ, ಶೋಭನ ಇಂಥ ಕಡೆ ಎಲ್ಲ ಅವಳ ಸುದ್ದಿ ಹರಡಿತು. ಸುತ್ತ ನೂರು ಹಳ್ಳಿಗೆ ಸಮಾಚಾರ ಹಬ್ಬಿತು.

ಖಾಯಿಲೆ ಅಂತ ಯಾರಾದರೂ ಒರಗಿದರೆ, ತಕ್ಷಣ ಅವರನ್ನ ನಮ್ಮ ಹಳ್ಳಿಗೆ, ನಡೆಸಿಕೊಂಡೋ, ಎತ್ತಿನ ಗಾಡೀಲಿ ಕೂರಿಸಿಕೊಂಡೋ, ಕರೆದು ತರುವರು. ದೇವಾತಾ ಸಂಭೂತಳಾದ ನಮ್ಮೂರು ಹುಡುಗಿ, ಅವರನ್ನು ನೋಡಿ, ಸುಮ್ಮನಿದ್ದರೆ—ಪಾಪ, ಜೋಲು ಮುಖ ಹಾಕಿಕೊಂಡು, ಔಷಧಿ ಉಪಚಾರ ಇತ್ಯಾದಿಗೆ ಸಾಲಕ್ಕೇರ್ಪಾಟು ಮಾಡುವರು. "ವಾಸಿಯಾಗುವು ದಿಲ್ಲ" ಅಂದರೆ, "ಮಾತಾಯಿ! ನೀನು ಆದಿಶಕ್ತಿ! ಮಹಾಮಾಯೆ!" ಎಂದು ಹೊಗಳಿ, ಧೂಪಹಾಕಿ, ಊರಿಗೆ ಹಿಂತಿರುಗುವರು.

ಅವಳು ವಾಸಿ ಆಗೋಲ್ಲ ಅಂತ ಹೇಳಿದವರ ಪೈಕಿ ಹಲ ಕೆಲವರಿಗೆ ಆಗಿದೆ, ಸರಿ! ಆದರೆ, ಅವೆಲ್ಲ ಎಲ್ಲಿ ಬೆಳಕಿಗೆ ಬರುತ್ತೆ? ಬಂದರೂ, ನಾವು ಅದನ್ನ ಅಲ್ಲಲ್ಲೇ ಅಜಮಾಯಿಷಿ ಮಾಡಿ, ಅಪಪ್ರಚಾರ ಹಚ್ಚಿಸಿ, ಅನ್ಯಾಯದ ದೂಷಣೆ, ಅಂತ ಪೇಪರುಗಳಲ್ಲಿ ಪ್ರಿಂಟ್‌ಮಾಡಿಸಿ ಬಿಡುತ್ತಿದ್ದೆವು. ವಾಸಿ ಆಗೋಲ್ಲ ಅಂತ ಮಹಾ ಮಾಯಾ ಸ್ವರೂಪಿಣಿಯೇ ಆದ ಆ ಹುಡುಗಿ ಹೇಳಿದನಂತರ, ಹಾಸಿಗೆ ಯಿಂದ ಏಳುವುದಕ್ಕೆ ಯಾರಿಗೆ ತಾನೆ ಕೆಚ್ಚು ಇದ್ದೀತು, ಯೋಚಿಸಿ.

ಅಂತು, ಡಾಕ್ಟರುಗಳ ಹತ್ರ ಹೋಗೋಕೆ ಮುಂಚೆ, ನಮ್ಮೂರು ಪುಟ್ಟ ತಾಯಿ (ಇದು ಆ ಹುಡುಗಿ ಹೆಸರು, ನಾವು ಆ ಮೇಲೆ...)ದೇವಿಯನ್ನು ಕಾಣೋದು ಕ್ಷೇಮ, ವೃಥಾ ಹಣ ವ್ಯಯ ಮಾಡಬಾರದು ಎಂಬ ಬುದ್ಧಿ ಊರಿನವರಿಗೆಲ್ಲ ಬಂತು. ಜನರ ತಂಡವನ್ನು ತಡೆಗಟ್ಟಲು, ನಾವು, ಬಂದವ ರೆಲ್ಲ ಒಂದು ರೂಪಾಯಿ ಗೋಲಕದಲ್ಲಿಡಬೇಕು' ಎಂದು ವಿಧಿಸಿದೆವು. ಗಂಟೆ ಗಂಟೆಗೂ ಗೋಲಕವನ್ನು ಖಾಲಿ ಮಾಡುತ್ತಿದ್ದೆವು, ಮುಂದೆ ಬರುವವರು ರೂಪಾಯಿ ಇರಿಸಲು ಅನುಕೂಲವಾಗುವಂತೆ!

ಕೊನೆಗೆ, ಒಂದು ಕಚೇರಿಯನ್ನೇ ತೆರೆದೆವು. ಖಾಯಿಲೆಯಾದವರನ್ನು ಮುಖತಃ ತರಬೇಕಾಗಿಲ್ಲ, ಅವರದು ಫೋಟೋ ತಂದರೂ ಸಾಕು, ಎಂದೆವು. ಇದರಿಂದ ವರಮಾನ ಹೆಚ್ಚಿತು.

ಸೊಸೆಯರು ಬರುವರು! ಅತ್ತೆಂದರು ಬದುಕುಲ್ಲ ತಾನೆ, ಅಂತ ಕೇಳೋಕೆ. ಗುಮಾಸ್ತೆಯರಂತೂ ವಿಪರೀತ, ಕೆಳಗಿನ ಗ್ರೇಡಿನ ಅಧಿಕಾರಿ

ಗಳು, ಪ್ರಮೋಷನಿಗಾಗಿ ಬಹುದಿನ ಕಾದಿರುವ ನೌಕರರು, ಆಸ್ತಿಗಾಗಿ ಬಹಳ ವರ್ಷ ಕಾಯ್ದು ಕುಳಿತಿರುವ ಗಂಡು ಮಕ್ಕಳು—ಎಲ್ಲರೂ ಬಂದು, ಖಾಯಿಲೆ ಬಂದಿದೆ, ಸದ್ಯ. ಏನಾಗುತ್ತೆ? ನಮಗೇನಾದರೂ ಗತಿ ಕಾಣಿಸುತ್ತೀರಾ?' ಎಂದು ಕೇಳುವರು. ಪುಟ್ಟ ತಾಯಿ ದೇವೀದು ಅದೆಂಥ ನಾಲಗೆ ಅಂತೀರಾ.... ಹೂಂ, ಅಂದರೆ, ನೂರಕ್ಕೆ ತೊಂಬತ್ತೂ, ಹೂನೇ!

ನೂರಾರು ವೃತ್ತ ಪತ್ರಿಕಾ ಕರ್ತರೂ ಗುಟ್ಟಾಗಿ ಪುಟ್ಟ ತಾಯಿ ದೇವಿ ಎದುರು ಬಂದು, 'ಇಂಥ ಜನನಾಯಕನಿಗೆ ಜ್ವರ ಬಂದಿದೆ' ಅಂತ ಫೋಟೋ ತೋರಿಸುವರು. ಅವಳು ತಲೆ ಅಲ್ಲಾಡಿಸಿದರೆ, ಅವರು ತಕ್ಷಣವೇ ಚರಮ ಶ್ಲೋಕರ ಜನಾನುಕೂಲಕ್ಕಾಗಿ ಒಂದು ರೂಪಾಯಿ ಗೋಲಕಕ್ಕೆ ಹಾಕಿ, ಪುಟ್ಟ ತಾಯಿಗೆ ಕೈಮುಗಿಯುವರು.

ಅಣು ಬಾಂಬು ಸಿಡಿಯುವ ಮೊದಲೇ ಸತ್ತೆ ಹೋಗೋಣ; ಹೊಟ್ಟೆಗೆ ಹಿಟ್ಟು ಇನ್ನೂ ಕಡಮೆಯಾಗುವುದರೊಳಗೆ ಕೈಲಾಸಕ್ಕೋ ವೈಕುಂಟಕ್ಕೋ ಹೊರಟು ಬಿಡೋಣ ಅಲ್ಲಿ ಭಗವಂತನ ಸನ್ನಿಧಿ. ಇಲ್ಲಿಯಷ್ಟು ತಾಪತ್ರಯ ಇರಲಾರದು; ಮಕ್ಕಳು ದೊಡ್ಡವರಾಗಿ ಪೋಲೀ ಪೋಕರಿಗಳಾಗುವುದನ್ನು ಕಂಡು ಕಣ್ಣೀರಿಡುವ ಬದಲು ಅವು ಮುದ್ದಾಗಿರುವಾಗಲೇ ಮೊದಲನೆಯ ಜ್ವರ ದಲ್ಲೇ ಪಂಜರದಿಂದ ಹಾರಿ ಬಿಡೋಣ—ಎಂಬ ತವಕವಿರುವ ಸಾವಿರಾರು ಜನರು, ತಮ್ಮ ಆಸೆ ನೆರವೇರುತ್ತದೋ, ಎಂದು ಪುಟ್ಟ ತಾಯೀನ ವಿಚಾರಿಸಿ, ಗೋಲಕವನ್ನು ತುಂಬುತ್ತಿರುವರು.

ಇದು, ನಮ್ಮೂರು ಸೋಜಿಗ! ಬದುಕಬೇಕು ಎಂಬ ಆಸೆ ಇರುವವರ ಗಿಂತ, ಸತ್ತರೆ ಸಾಕು ಎಂಬ ಸಂಕಟ ಇರುವವರು ಜಾಸ್ತಿ, ಇಂದಿನ ಪ್ರಪಂಚ ದಲ್ಲಿ!

ಹಿಂದೆ "ಏನೇ ಬರಲಿ ಒಗ್ಗಟ್ಟಿರಲಿ" ಎಂದು ಕೂಗಿದವರು, ಈಗ, "ಏನೇ ಬರಲಿ, ಬಿಕ್ಕಟ್ಟಿರಲಿ" ಎಂದು ಕೂಗ ಹತ್ತಿರುವರಂತೆ.

* * * *

"ಶತ್ರುಗಳನ್ನು, ನಮ್ಮ ಪರಮ ಶತ್ರುಗಳನ್ನು ನಾವು ಪ್ರೀತಿಯಿಂದ ಒಲಿಸ ಬೇಕು" (ಭಾಷಣ) "ಹೆಂಡ ನಮ್ಮ ಶತ್ರು; ಪರಮ ಶತ್ರು" (ಅದೇ ಭಾಷಣ)

ಬೆಲ್ಲದಂಥ ನಡಿಗೆ

ಬೆಲ್ಲದ ಮೇಲೆ ಹತೋಟಿ ಬಂತು; ಬೆಲ್ಲ ಮಾಯವಾಯಿತು. ಬಲ್ಲವನೇ ಬಲ್ಲ ಬೆಲ್ಲ ಎಲ್ಲಿದೆ, ಎಂಬೋದನ್ನ. ಧೋತಿಗಳಮೇಲೆ ಕಂಟ್ರೋಲ್ ಹಾಕಿ, ಧೋತಿಗಳೊಂದೂ ಸಿಗುವುದಿಲ್ಲ. ಅಳಿಯನಿಗೆ ಕೊಡುವುದಕ್ಕೆ ಕೂಡ. ಕಂಟ್ರೋಲ್, ಎಂಬ ವ್ಯವಸ್ಥೆಗೆ ಆ ಮಹತ್ವವಿದೆ. ಅಂಗಡಿ ಮಳಿಗೆ ಗಡಂಗ್ ಕಾರ್ಖಾನೆ—ಎಲ್ಲ ಸ್ಥಳಗಳಿಂದಲೂ ನಿಮಿಷಮಾತ್ರದಲ್ಲೇ ಲಕ್ಷಾಂತರ ಟನ್ ಸಾಮಾನುಗಳು, ಕಂಟ್ರೋಲ್ ಎನ್ನುತ್ತಲೂ, ಭೂಗತ, ಮಂಗಮಾಯ !

ಇದು ನಮ್ಮ ಅನುಭವದ ಮಾತು; ದಿನ ದಿನದ ಅನುಭವ; ಕರತಲಾ ಮಲ ! ಮೆಣಸಿನಕಾಯಿ ಮೇಲೆ ಕಂಟ್ರೋಲ್ ಹಾಕಿ; ಮೆಣಸಿನಕಾಯಿ ಫೋಟೋ ಇರುವುದಿಲ್ಲ, ಬೆಳಕಿನಲ್ಲಿ. ಪೆನ್‌ಸಿಲಿನ್ ಮೇಲೆ ಹತೋಟಿ, ಪಿನಿಸಿ ಲಿನ್‌ಗಾಗಿ ಹಾಹಾಕಾರ ! ಆಲೂಗಡ್ಡೆ ಮೇಲೆ ಕಂಟ್ರೋಲ್ ವಿಧಿಸಿ, ಆಲೂ ಗಡ್ಡೆಯನ್ನು ಕಂಡವರಾರು ?

ಹಾಗಂದಮೇಲೆ ಈ ಕಂಟ್ರೋಲಾಸ್ತ್ರವನ್ನು ಪ್ರಯೋಗಿಸಿ ನಾವು ಏತಕ್ಕೆ ಇನ್ನೂ ದೇಶವನ್ನು ಉತ್ತಮ ಪಡಿಸಬಾರದು ? ನಮ್ಮ ಕಾಂಗ್ರೆಸ್ ಅಧ್ಯಕ್ಷ ಮಹಾ ಮಹಿಮ ತಾಂಡನ್‌ರವರು ಹಾಲುಕುಡಿಯಬೇಡಿ, (ಹಾಲು ಕುಡಿದ ಮಕ್ಕಳೇ ಬದುಕುವುದಿಲ್ಲ) ಉಪ್ಪು ತಿನ್ನಬೇಡಿ (ಎರಡು ಎಗೆಯಬೇಕಾಗಿ ಬರ ಬಹುದು) ಸಕ್ಕರೆ ಬಲು ಕೆಟ್ಟದ್ದು (ಇಲ್ಲದ ಬೆಲ್ಲವೇ ಅದಕ್ಕಿಂತ ಸಾವಿರ ಪಾಲು ವಾಸಿ) ಸತ್ತ ದನಗಳ ತೊಗಲಿಂದ ಮಾಡಿದ ಚಪ್ಪಲಿಗಳನ್ನು ಧರಿಸಿ (ಜೀವಂತ ದನಗಳ ತೊಗಲನ್ನು ಯಾರು ಸುಲಿಯುತ್ತಾರೋ, ತಿಳಿಯದು)—ಎಂದೆಲ್ಲ ದೇಶಕ್ಕೆ ಉಪದೇಶ ಮಾಡುತ್ತಾರಲ್ಲಾ ? ಹಾಲಿಗೆ ಕಂಟ್ರೋಲ್ ಅನ್ನಿ ; ಒಂದು ತೊಟ್ಟೂ ಸಿಗುವುದಿಲ್ಲ. ಉಪ್ಪಿಗೆ ಕಂಟ್ರೋಲ್ ಎನ್ನಿ. ಅದರ ಹಗಲು ದರೋಡೆ ನಿಂತುಹೋಗುತ್ತೆ.

ಲಂಚ ನಿಲ್ಲಿಸುವುದಕ್ಕೆ ಇದೇ ಉಪಾಯ. ಕಂಟ್ರೋಲ್ ಹಾಕಿ. ಕಚೇರಿ ಗಳಲ್ಲೂ ಆಫೀಸುಗಳಲ್ಲೂ ಅಲ್ಲಿಂದಾಚೆಗೆ ಜನ ಲಂಚ ಕೊಳ್ಳುವುದೂ ಇಲ್ಲ, ಕೊಡುವುದೂ ಇಲ್ಲ, ಪಂಚೆಗಳನ್ನ ಅಂಗಡಿಗಳಿಂದ ಓಡಿಸಿ, ಬದಿಗಿರಿಸಲು ಕೈಕೊಂಡ ಉಪಾಯವೇ ಲಂಚಕ್ಕೂ ಅನ್ವಯಿಸುತ್ತದೆ. ಭಾಷಣಗಳಿಗೆ ಕಂಟ್ರೋಲ್‌ಹಾಕಿ. ಭಾಷಣಮಾಡುವ ಕೇಳುವ ಚಟ ಇರುವವರು ಕತ್ತಲೆ ಪೇಟೆ ಹುಡುಕಲಿ. ಆದರೆ, ಒಂದು. ಮಾಡುವ ಭಾರಾಟೆಯಲ್ಲಿ ಕಂಟ್ರೋಲಿ ಗೇನಾದರೂ, ಕಂಟ್ರೋಲ್ ಹಾಕೀರಿ ! ಜೋಕೆ.

— ರೇವಣ್ಣ.

ಸಂಪಾದಕರೆ—

ಕೊರವಂಜಿ ಸಂಪಾದಕರೆ—

ನೀವು ಬರೆದಂತೆ ನನಗೆ ಹೊತ್ತೂ— ಕಾಗದವೂ ಮಸಿಯೂ (ಕಂಟಿಜೆನ್ಸಿ ದುಡ್ಡಿನಿಂದ ಹೊಡೆದದ್ದು ಅಂತ ನನ್ನ ಮಿತ್ರ ಅನ್ನುತ್ತಾನೆ—ಅದು ತಪ್ಪು ಆತ ಹಾಗೆ ಅನ್ನಬಾರದು ಅಲ್ಲವೆ?) ಸಿಕ್ಕಿರುವುದರಿಂದ ನನ್ನದೊಂದು ಕೋರಿಕೆ ಯನ್ನು ವಿಜ್ಞಾನ ಮಾರ್ತಾಂಡರಿಗೆ ಕಳಿಸಬೇಕೆಂದು ಒಂದು ಬಿನ್ನಹ.

೧. ನನ್ನ ಚಿಕ್ಕಮ್ಮನ ಸೋದರ ಸೊಸೆಗೆ ಅರೆತಲೆ ಶೂಲ. ಕಣ್ಣು ಡಾಕ್ಟರು ಕನ್ನಡಕ ಹಾಕಿಸಿದರು, ಹಲ್ಲು ಡಾಕ್ಟರು ಇದ್ದ ಹಲ್ಲೆಲ್ಲಾ ಕೀಳಿಸಿ ದರು. ತಿಮ್ಮಪ್ಪನಿಗೆ (ತಿರುಪತಿ) ತಲೆ ಕೊಟ್ಟದ್ದಾಯಿತು. ಹಾಳು ಶೂಲೆ ಜುಂ ಎನ್ನಲಿಲ್ಲ. ತಿರುಮ ಕೊಂಡ್ಲು ನರಸೀಪುರದ ಬಳಿ ಬೈರಾಗಿಯ ಯಂತ್ರವೂ ಆಯಿತು. ಆಕೆ ನೋವು ಹೆಚ್ಚಾದಾಗ ಹುಚ್ಚಾಗುವಳು. ಇದ ಕ್ಕೊಂದು ಗುಳಿಗೆ—ಒಂದು ಗುಟಿಕ—ಒಂದು ಭಸ್ಮ—ಒಂದು ತಾಯಿತ ಯಾವುದಾದರೂ ಸರಿಯೆ ಮಾರ್ತಾಂಡರು ಸಂಶೋಧನೆ ನಡೆಸಿ ಆ ಪ್ರಾಣಿಯ ಪ್ರಲಾಪ ಪರಿಹರಿಸ ಬೇಕೆಂದು ಪ್ರಾರ್ಥನೆ.

ಇತಿ ನಿಮ್ಮ,

ಕೆಂಚಾಪುರದ ಕೊಟ್ರಯ್ಯ.

ವಿ. ಸೂ. :—ಇಲ್ಲದಿದ್ದರೆ ಹರಹರ ಎನ್ನುವ ಮಾತ್ರೆ ಸಿಕ್ಕರೆ ಕಳಿಸಿ. (ವಿಷಯ ಗುಟ್ಟಾಗಿರಲಿ) ಅವಳ ಆಸ್ತಿಗೆ ನಾನೇ ಗತಿ.

ಸೊಂಪಾದಕರೆ !

ನನಗೊಂದು ಪರ್ಸ್ ಬೇಕು. ಸಾದಾ ಒಂದೇ ಒಂದು ರೂಪಾಯಿ ಅದ ರಲ್ಲಿ ಇರುತ್ತಿದ್ದರೆ ಸಾಕು. ಒಂದು ರೂಪಾಯಿ ತೆಗೆದರೆ ಮತ್ತೊಂದು ಅಲ್ಲಿ ಸಿದ್ಧವಾಗಿರಬೇಕು. ವಿಜ್ಞಾನ ಪ್ರಪಂಚದ ಮಾರ್ತಾಂಡರು ಇದನ್ನು ದೊರೆ ಕಿಸಿ ಕೊಡುವರೆ? ಕೇಳಿನೋಡಿ.

ಇತಿ ವಿಶ್ವಾಸಿ,

ಸ. ಗೋಪಾಳಯ್ಯ.

ಅ|| ಮಾಸ್ತರ್, ಗಾ|| ಪ್ರೈ|| ಸ್ಕೂಲು,

ಬುಕ್ಕಾಂಬೂದಿ.

ವಿ. ಸೂ. :— ಸ. ಎಂದು ಬರೆದರೆ ಕಾಗದ ತಡವಾಗಿ ಬರುತ್ತೆ. ಸಂಜೆ ಗವಳ ಗೋಪಾಲಯ್ಯ ಎಂದು ವಿವರವಾಗಿ ಬರೆಯಿರಿ.

ಅಯ್ಯಾ !

ಸ್ನಾನವಾದ ಕೂಡಲೆ ಕನ್ನಡಿ ಹಿಡಿದು ನೀಟಾಗಿ ನಾಮಾ ಎಳೆದು ಕೊಳ್ಳಲು ಬಹಳ ಬೇಜಾರು. ವಿಜ್ಞಾನ ಮಾರ್ತಾಂಡರು ಸಂಶೋಧನೆಮಾಡಿ ತಾನಾಗೇ ಮೂರೆಳೆ ನಾಮಾ ಎಳೆಯುವ ಒಂದು ಮಿಷರ್ ಕಂಡು ಹಿಡಿದು ಕೊಟ್ಟರೆ—ಒಳ್ಳೆ ಪುಳಿಯೋಗರೆ ಕೊಡಿಸುತ್ತೇನೆ. ತಿಳಿಸಿ ನೋಡಿ.

ಇತಿ ನಮಸ್ಕಾರ,

ಕಾ. ತ್ರೈಯಿಂಗಾರ್.

ವಿ. ಸೂ. :—ಈಗ ಒಳ್ಳೆ ನಾಮದುಂಡೆಗಳೇ ಸಿಕ್ಕಲ್ಲ—ಅದರ ಮೇಲೂ ಶೋಧನೆ ನಡೆಸಲಿ.

ಸಂಪಾದಕರಲ್ಲಿ ವಿಜ್ಞಾಪನೆ,

ಛಳಿಗಾಲ. ಹಾಳು ಬೆಳಗಿನ ಜಾವ ಎದ್ದು ಒಲೆ ಹೊತ್ತಿಕ್ಕಿ ಕಾಫಿ ಕಾಸೊದೂಂದ್ರೆ ಪ್ರಾಣ ಹೋಗುತ್ತೆ. ಅದಕ್ಕೆ ಒಂದು ಯಂತ್ರ—ಕಾಫಿ ಕಾಯಿಸಿ ಲೋಟಾಕ್ಕೆ ಸುರಿದು ಮೇಜಿನ ಮೇಲಿಡೋ ಯಂತ್ರ ಮಾಡಿಸಿ ಕೊಡಿ. ಹಲ್ಲುಜ್ಜಿ ತಲೆ ಬಾಚಿ ಕುಂಕುಮ ಇಡೋಕೂ ಒಂದು ಮಿಷಿರ್ ಕಂಡು ಹಿಡಿದರೆ ನಮ್ಮಂಥವರಿಗೆ ಉಪಕಾರ ಮಾಡಿದಂತಾಗುತ್ತೆ. ಮಾರ್ತಾಂಡರಿಗೆ ಹೇಳಿ. ವಿಶ್ವಾಸವಿರಲಿ.

ಇತಿ ನಿಮ್ಮ

ಸೋ. ಚಾಮುಂಡಮ್ಮ.

ವಿ. ಸೂ. :—ಹಗಲೆಲ್ಲಾ ಮಲಗುವ ಅಭ್ಯಾಸದವಳಾದ ನನಗೆ ಸುಟ್ಟು ಸುಡುಗಾಡು ಕೆಟ್ಟ ಕನಸು ಬೀಳುತ್ತೆ. ಅದು ಬೀಳದಹಾಗೆ ನೋಡಿಕೊಳ್ಳೋ ಒಂದು ಮಿಷರನ್ನು ಆದರೆ ಮಾಡಿಸಿ ಕಳಿಸೀಂತ ತಿಳಿಸಿ

ಸಂಪಾದಕರೆ—

ಕೆಳಕಂಡ ವಿಷಯುಗಳಲ್ಲಿ ಸಂಶೋಧನೆ ನಡೆಸುವಂತೆ ವಿಜ್ಞಾನ ವಿಶಾರದ ರಿಗೆ ತಿಳಿಸಿ—

ಕುಡುಗೋಲು :—ಕೊಯ್ದು ಕೊಯಿಲಿನ ನಿಜವಾದ ಪ್ರಮಾಣ ತೋರಿಸು ವಂಥದ್ದು. ಕಳ್ಳಪಣತಕ್ಕೆ ಬೆಳೆಸಾಗಿಸಿದೊಡನೆ ಬೆಟ್ಟೆನೆ ಚೀರಬೇಕು.


ಸುತ್ತಿಗೆ :—ವೃಥಾ ಬೊಗಳಿಕೆ. ಸ್ವಂತ ಪುರಾಣ ತನ್ನ ಪರಾಕ್ರಮ. ಸುಳ್ಳು ಭರವಸೆ—ಅಕ್ಕಿ ಆಸೆ ತೋರಿಸಿ ಆ ಮಾನ್ಯರಾದ ನಾಯಕ ಮಣಿಗಳು ಭಾಷಣ ಪ್ರಾರಂಭಿಸಿ ಕೂಡಲೆ—ಗಾಂಧೀಜಿ ಹೇಳಿದಂತೆ—ಎಂದು ಹೇಳಿದ ಕೂಡಲೇ ತಲೆಯಮೇಲೆ ಕುಟುಕಬೇಕು, ಇಲ್ಲವೆ ಮಟುಕಬೇಕು. ಅಂತಹ ಸುತ್ತಿಗೆ ಕಂಡುಹಿಡಿಯಲಿ.

ಗುಂಡುಸೂಜಿ :—ಲಂಚ ಕೈಗೆ ಬಿದ್ದ ಕೂಡಲೆ, ಸುಳ್ಳು ನಾಲಿಗೆ ಮುಟ್ಟಿದ ಕೂಡಲೇ, ಕರಿಪೇಟಿಯ ಹಣ ಕೈಗೆ ಸೋಂಕಿದ ಕೂಡಲೆ, ಮೋಸ ತಟವಟ ಲಪಟಾಯಿಸುವ ಯೋಚನೆ ತಲೆಯಲ್ಲಿ ಸುಳಿದ ಕೂಡಲೆ ಚುಚ್ಚಿ ಎಚ್ಚರಿಸುವ ಗುಂಡುಸೂಜಿ ಬೇಕು.

ಕಡೆಯದಾಗಿ ಅಟೋಮ್ಯಾಟಿಕ್ ಗ್ರಾಮಾಫೋನು—ಒಂದು ರಿಕಾರ್ಡು. ಸದಾ "ಸಬುಕೋ ಸನ್ಮತಿ ದೇ ಭಗವಾನ್" ಅಂತ ಹೇಳುತ್ತಿರಬೇಕು—ಎಲ್ಲರ ಕಿವಿಯಲ್ಲು.

ಇತಿ ಶರಣಾರ್ಥಿ,

—ಯಜ್ಞಪಶು.



ಲೇಖನ ಖಾರ !

"ಒಂದು ಹಾಳೇಗೆ ಐವತ್ತು ರೂಪಾಯಿ ಕೊಡ್ತಾರಂತೆ ಸ್ಯೆಂಟ್ ನಿಹಾಲ್ ಸಿಂಗ್‌ಗೆ !"

"ಒಂದು ಹಾಡಿಗೆ ಸಾವಿರ ಕೊಡ್ತಾರಂತೆ ಸಿನೀಮಾದಲ್ಲಿ !"

"ಒಂದು ಸಣ್ಣ ಕತೇಗೆ ನೂರು ರೂಪಾಯಿ ಕೊಡ್ತಾರಂತೆ !"

ಈ ತರಹ ಸುದ್ದಿಗಳನ್ನು ಕೇಳಿ ಕೇಳಿ ಕಿವಿ ನೆಟ್ಟಗಾಗಿತ್ತು ;

ನಾನೂ ಲೇಖನಖಾರ ಆಗಲೇ ಬೇಕು ಎಂದು ಸಿದ್ಧಾಂತ ಮಾಡಿದೆ. ಅದಕ್ಕೆ ಸಹಾಯಕವಾದ ಸಾಹಿತ್ಯವನ್ನು ಓದಿದೆ.

* * * *

ಕವಿಶ್ರೇಷ್ಠ ಮಿಲ್ಟನ್ ತನಗಾದ ಒಂದು ಅನುಭವವನ್ನು ಆಗಾಗ್ಗೆ ಹೇಳುತ್ತಿದ್ದನಂತೆ. ಪುಸ್ತಕ ಪ್ರಚಾರಕನ ಹತ್ತಿರ ಹೋಗಿ "ನಾನೊಂದು ಮಹಾ ಗ್ರಂಥ ಬರೆಯುತ್ತೇನೆ" ಎಂದಾಗ ಆತ ಅಂದನಂತೆ "ನಿನಗೆ ಮಹಾ ಗ್ರಂಥ ಆಗಿರಬಹುದು ಆದರೆ ಓದುಗರಿಗೆ ಅದು ಮಹಾ ಗ್ರಂಥವಾಗಿರಬೇಕು" ಎಂದು. ಹಲವಾರು ವರ್ಷಗಳ ನಂತರ ಮಿಲ್ಟನ್ ಆ ಪ್ರಚಾರಕನನ್ನು ಭೇಟಿಯಾದಾಗ ಈ ಸಂವಾದವನ್ನು ಜ್ಞಾಪಿಸಿ "ಈಗೋ ನೋಡು ನಿನಗೂ ಈ ಗ್ರಂಥ ಮಹಾ ಗ್ರಂಥವಾಗಿ ಕಾಣಿಸಬಹುದು" ಎಂದನಂತೆ. ಆ ಗ್ರಂಥ "ಪ್ಯಾರಡೈಸ್ ಲಾಸ್ಟ್"

ತಿಮಿಂಗಿಲಗಳ ಶಿಕಾರಿಯಮೇಲೆ ಒಬ್ಬಾತ ಒಂದು ಪುಸ್ತಕ ಬರೆಯಲು ಪ್ರಯತ್ನಪಟ್ಟನಂತೆ. ಅದು ಸರಿಯಾಗಿ ಮುಂದೆ ಸಾಗದೆ ಆತ ಹಿರಿಯರ ಸಲಹೆ ಪಡೆಯಲು ಕವಿವರ ವರ್ಡ್ಸ್‌ವರ್ತ್ ಹತ್ತಿರ ಹೋಗಿದ್ದನಂತೆ. ವರ್ಡ್ಸ್‌ವರ್ತ್ ಕೇಳಿದನಂತೆ "ತಿಮಿಂಗಿಲಾ ನೋಡಿದ್ದಿಯಾ ! ಅದರ ಶಿಕಾರಿ ನಿನಗೆ ಗೊತ್ತೇ ? ನೀನು ಮಾಡಿದ್ದೀಯಾ ?" ಅಂತ.

ಆತ ಹೇಳಿದನಂತೆ "ನೋಡಿಲ್ಲ. ನಾನು ಮಾಡಿಲ್ಲ, ಆದರೆ ತಕ್ಕ ಮಟ್ಟಿಗೆ ಓದಿದ್ದೇನೆ. ಸಾವಿರ ಹಾಳೆಯಷ್ಟು ಬರೆದಿದ್ದೇನೆ. ಓದುತ್ತೀರಾ" ಅಂತ.

"ಬರೆದಿದ್ದನೆಲ್ಲಾ ಒಲೆಗೆ ಹಾಕಿ. ನಿಮ್ಮ ಅನುಭವವನ್ನು ಮಾತ್ರ ಬರಿಯಿರಿ" ಎಂದನಂತೆ ವರ್ಡ್ಸ್‌ವರ್ತ್.

ಈ ಸಲಹೆಯನ್ನು ಮನ್ನಿಸಿದಾತ ಡಿ ಕ್ವೆನ್ಸಿ. ಉತ್ತರ :—ಓಪಿಯಂ ಈಟರ್.

* * * *

ಇಷ್ಟು ತಿಳಿದುಕೊಂಡೆ ಲೇಖನ ಪ್ರಚಾರಕನಿಗೆ ಹಿರಿದಾಗಿ ಕಾಣಿಸಬೇಕು. ಅನುಭವ ಪೂರ್ಣವಾಗಿರಬೇಕು.

ನನ್ನ ಅನುಭವವೆಲ್ಲಾ—"ಪೋಲೀಸು. ಬೈಸಿಕಲ್ಲಿಗೆ ಲೈಸೆನ್ಸ್ ಇಲ್ಲ—ದೀಪಇಲ್ಲ—ನ್ಯಾಯಾಸ್ಥಾನ—ಜುಲ್ಮಾನೆ—"

ಈ ಅನುಭವವನ್ನೇ ಹಿರಿದುಮಾಡಿ ಪ್ರಚಾರಕನ ಮನಸ್ಸಿಗೆ ಹಿರಿದಾಗಿ ಕಾಣಿಸುವಂತೆ ಮಾಡಬೇಕು. ಯೋಚಿಸಿದೆ! ಇಂಥಹ ವಿಷಯ ರುಚಿಸಬೇಕಾದರೆ 'ನ್ಯಾಯಾಸ್ಥಾನದ ಸಮಾಚಾರ'ದ ಪ್ರಚಾರಕನಿಗೇ !

ಸರಿ! ಆತನ ವಿಷಯ ಸ್ವಲ್ಪಮಟ್ಟಿಗೆ ಅರಿತುಕೊಂಡೆ.

ಒಂದು ಲೇಖನ ಬರೆದು ಕಳಿಸಿದೆ. ಖಾರವಾದ ಲೇಖನ. ನಮ್ಮ ನೂತನ ರಾಜ್ಯಾಂಗದ ಪ್ರಕಾರ ಮನುಷ್ಯನ ಹಕ್ಕು, ಸ್ವಾತಂತ್ರ್ಯ ಬಲು ಘನವಾದದ್ದು. ಕೇವಲ ಎರಡು ಚಕ್ರದ ಬೈಸಿಕಲ್ಲಿಗೆ, ಲೈಸೆನ್ಸ್ ಆವತ್ತು ಇಲ್ಲದ ಕಾರಣದಿಂದ ಆತನನ್ನು ಪೋಲೀಸ್ ಠಾಣೆಗೆ ಕರೆದುಕೊಂಡುಹೋಗಿ. ಬೈಸಿಕಲ್ಲನ್ನು ಅರೆಸ್ಟ್‌ಮಾಡಿ ಈತನ ಕೈಗೆ ಚೀಟಿ ಕೊಡುವುದು, ಮಾನವನ ಹಕ್ಕಿಗೆ ವ್ಯತಿರಿಕ್ತ ಅಲ್ಲವೇ? ಮುಂಬರುವ, ಸ್ವಾತಂತ್ರ್ಯ ಪತಾಕೆ ಹಾರಿಸಿದ ನಮ್ಮ ದೇಶಕ್ಕೆ ಅಪಮಾನ ಅಲ್ಲವೇ? ಎಂದು ಒಂದು ಹಿರಿಯ ಲೇಖನ ಬರೆದು ಕಳಿಸಿದೆ.

ಆತ ಏನು ಬರೆದ ಗೊತ್ತೆ! "ಹಸುರು ಹಚ್ಚಿನ ಲಾಯರುಗಳು ಕಾನೂನಿನ ಪರಿಮಿತಿ ಕಾಣದೆ, ನ್ಯಾಯಾಂಗದ ಮರ್ಮ ತಿಳಿಯದೇ ತಲೆ ಕೆಟ್ಟು ಲೇಖನ ಬರೆಯುತ್ತಾರೆ." ಎಂದು ನನ್ನ ಮಹಾ ಲೇಖನ ಹಿಂತಿರುಗಿ ಕಳಿಸಿದ್ದ.


ಆ ಮೇಲೆ ನನ್ನ ಅನುಭವನನ್ನು ಹೆಚ್ಚುಮಾಡಿಕೊಳ್ಳುವ ಸಂದರ್ಭಗಳು ಹೇರಳವಾದುವು. ಹನ್ನೊಂದು ಗಂಟೆಗೆ ಹೋದರೂ ನನ್ನ ಹೆಸರು ಕರೆಯುವ ಹೊತ್ತಿಗೆ ಐದು ಗಂಟೆಯಾಗುತ್ತಿತ್ತು. ಅಷ್ಟು ಹೊತ್ತು ಅನುಭವವನ್ನು ಬೆಳೆಸಿ

ಕೊಂಡೆ. ಕಾನೂನಿನ ಕಲಂಗಳು ಬಾಯಿಪಾಠ ಆಯಿತು. ಅರ್ಥವಾಗದಿದ್ದರೂ ಹೇಬಿಯಸ್, ಕಾರ್ಪಸ್ ಎಂಬ ಘನ ವಾಕ್ಯಗಳು ತಲೆಗೇರಿದುವು. ರಾಜ್ಯಾಂಗದ ಕಾನೂನಿನ ಪ್ರತಿ ಅಂಶದ ಅಂಕಿಗಳೂ, ಶ್ರೀ ಅಂಬೇಡ್ಕರಿಗೂ ಮರೆತಿರಬಹುದಾದವುಗಳೆಲ್ಲಾ, ಮೆದುಳು ಸೇರಿತು.

ಆರೇ ತಿಂಗಳಲ್ಲಿ ಇನ್ನೊಂದು ಲೇಖನ ಬರೆದೆ. ಅದೇ ವಿಷಯ ಬೇರೆ ಉಡುಪು. ಬೇರೆ ರಂಗು. ಬೇರೆ ಅಲಂಕಾರ.

"ನ್ಯಾಯಾಸ್ಥಾನದ ಸಮಾಚಾರ"ದಲ್ಲಿ ನನ್ನ ಲೇಖನವೇ ಅಗ್ರ ಲೇಖನ ನ್ಯಾಯಾಂಗದ ಪ್ರಗತಿ ಸಮ್ಮೇಳನಕ್ಕೆ ನನ್ನನ್ನೇ ಅಧ್ಯಕ್ಷನನ್ನಾಗಿ ಆರಿಸಿದ್ದಾರೆ. ಅಂದಮೇಲೆ ಲೇಖನ ಖಾರ ಅಲ್ಲವೆ?

—ಪ್ಲೀಡರ್.



ಅಮಲಿನ ಕದನ ನೋಡಿ.

ಅಂದಹಾಗೇ. ಚುನಾವಣೆ ಏನಾಯ್ತ್ರೀ!

ಚಿತ್ರ ಕಥೆ

"ಒಂದೂರ್ನಲ್ಲಿ ಒಬ್ಬ ಜಮಿಾನ್ದಾರ. ಮೊದಲ್ನೆ ಹೆಂಡ್ತಿ ತೀರ್ಕೊಂಡಿದ್ದಾಳೆ. ಎರಡನೆ ಹೆಂಡತಿ ಬೇಕಾಗಿದ್ದಾಳೆ. ಹರೀಶ್ ಬಾಬುವಿನ ಮಗಳು ನಳಿನಿ ಬಡವನಾದ ಆದರೆ ವಿದ್ಯಾವಂತನಾದ ಸುರೇಶ್‌ನಲ್ಲಿ ಅನುರಕ್ತಳಾಗಿದ್ದಾಳೆ. ಆದರೆ ಹರೀಶನಿಗೆ ಧನಪಿಶಾಚಿ, ಆದ್ದರಿಂದ ಅರ್ಧ ಶತಮಾನ ದಾಟಿದ ಜಮಿಾದಾರನಿಗೆ, ತನ್ನ ಮಗಳಿಗೆ ಇಷ್ಟವಿಲ್ಲದಿದ್ದರೂ, ಅವಳನ್ನು ಧಾರೆಯೆರೆದು ಕೊಡುತ್ತಾನೆ. ನಳಿನಿ ಗಂಡನ ಮನೆಗೆ ಬರುತ್ತಾಳೆ. ಕಮಲ್ ಜಮಿಾನ್ದಾರನ ಮೊದಲನೆಯ ಹೆಂಡತಿ ಮಗ. ಮದುವೆಗೆ ಬಂದಿರುವ ಹುಡುಗ. ಸುರೇಶ್ ಮತ್ತು ಕಮಲ್ ಸಹಪಾಠಿಗಳು........"

ಸುರೇಶನ ಈರ್ಷ್ಯೆ, ಕಮಲ್‌ನ ಸ್ನೇಹಪರತೆ, ಜಮಿಾನ್ದಾರನ ಕುಹಕ, ನಳಿನಿಯ ನಾಟ್ಯ ಮುಂತಾದುವನ್ನು ಪರದೆಯ ಮೇಲೆ ನೋಡಿ ನಲಿಯಿರಿ!

ಅಮೋಘ ಸಂಗೀತ, ಅದ್ಭುತ ನೃತ್ಯ, ನಿಸರ್ಗ ದೃಶ್ಯಗಳು ....

*　　*　　*

ನನ್ನ ಇಷ್ಟು ಕಥೆಯನ್ನು ನನ್ನ ಸ್ನೇಹಿತನೊಬ್ಬನ ಪ್ರೇರಣೆಯ ಮೇರೆ, ಶ್ರೀ|| ಖರ್ಧಾರ್‌ರವರಿಗೆ ತೋರಿಸಿದೆ. ನನ್ನ ಸ್ನೇಹಿತಾನೋ ನನ್ನ ವಿಷಯವಾಗಿ ಅವರ್ಮುಂದೆ ಇಲ್ಲದ್ದು ಸಲ್ಲದ್ದನ್ನೆಲ್ಲಾ ಊದಿದ. ಸರಿ, ಖರ್ದಾರರಿಗೆ ಬಹ್ಳ ಸಂತೋಷವಾಯ್ತು. ತಕ್ಷಣವೇ ನನ್ನ ಶುಭ ನಾಮಧೇಯವನ್ನು ವಿಚಾರಿಸಿದ್ರು. ಕಾಫಿ, ತಿಂಡಿ, ತರಿಸಿಕೊಟ್ರು. "ನಿಮ್ಮ ಕಥೆ ಚಿತ್ರಕ್ಕೆ ಬಹಳ ಯೋಗ್ಯವಾಗಿದೆ. ಇಂತಹ ಕಥೆಯನ್ನು ಬರೆಯುವವರೇ ಈಗ ವಿರಳ. ಈಗಿನ ಕಾಲದ ಸಾಮಾಜಿಕ ಚಿತ್ರಗಳು ಬಹಳ ಕೀಳ್ಮಟ್ಟಕ್ಕೆ ಇಳಿಯುತ್ತಿವೆ. ಆದ್ದರಿಂದಲೇ ಅನೇಕ ಜನ "ರಾಮಾವತಾರ್, ಕೃಷ್ಣ ಭಗವಾನ್, ಶೂರ್ಪಣಖಿ, ಪೂತಣಿ" ಮುಂತಾದ ಪೌರಾಣಿಕ ಕಥೆಗಳನ್ನು ಬೆನ್ನಟ್ಟಿದ್ದಾರೆ. ಆದ್ದರಿಂದ ನಿಮ್ಮ ಕಥೆಯು ನನ್ನ ಚಿತ್ರಕ್ಕೆ ಮನ್ನಣೆ ದೊರೆಯೋದ್ರಲ್ಲಿ ಸಂಶಯವೇ ಇಲ್ಲ" ಅಂದ್ರು. ನನಗೆ ಬಹಳ ಸೋಜಿಗವಾಯ್ತು.

"ಅಲ್ಲಾ ! ನಾನು ತಮಾಷೇಗೆ ಹೋಟ್ಲಲ್ಲಿ ಕಾಫಿ ಬರೋದು ಹೊತ್ತಾಗತ್ತೆ ಅಂತಿದ್ದಾಗ ಸಿನಿಮಾಚೀಟಿ ಹಿಂದೆ ಬರೆದ ಕಥೆಯನ್ನು ಇಷ್ಟು ಹೊಗಳ್ತಿದಾರಲ್ಲ! ನಿಜವಾಗಿಯೂ "ಖಧಾರ್ರ್" ಎಂದ್ರೆ ಸಾಮಾನ್ಯ ವ್ಯಕ್ತಿಯಲ್ಲ. ಆದರೆ ನನ್ನ ಈ ಕಥೆಯನ್ನು ಚಿತ್ರಿಸ್ತೀನಿ ಅಂತಾರಲ್ಲಾ, ಇವರ್ಗೇನಾದ್ರೂ ತಲೇಲಿ ಮೂಳೆಯಿದೆಯೋ" ಅನ್ನಿಸ್ತು. ಕೇಳಿಯೇಬಿಟ್ಟೆ, "ಸ್ವಾಮಿ. ನನ್ನ ಕಥೇನಾ ೧೨,೦೦೦ ಅಡಿ ಹೇಗ್ಮಾನೆ ಮಾಡ್ತೀರಾ" ಅಂತ. ಅದಕ್ಕವರು ನನ್ನ ಕಥೆಯನ್ನು ತುಂಡರಿಸಿ ೧೨,೦೦೦ ಅಡಿ ಮಾಡೋ ವಿಧಾನವನ್ನ ಬಹಳ ಸ್ವಾರಸ್ಯವಾಗಿ ವಿವರಿಸಿದ್ರು. ಇಕೋ ಅವರ ಪಟ್ಟಿ.

		ಅಡಿಗಳು
1.	ಜಮೀನ್ದಾರನ ದಬ್ಬಾಳಿಕೆಯ ದೃಶ್ಯಗಳು. ಅವನ ಮನೆಯಲ್ಲಿ ಆಗುವ ನೃತ್ಯ, ಸಂಗೀತ, ನೃತ್ಯ (ಶ್ರೀಮತಿ ಕುಕ್ಕೂಬಾಯಿಯಿಂದ) ಇತ್ಯಾದಿ.	೪೦೦
2.	ಹರೀಶನ ಮನೆಯ (ಬೊಂಬಾಯಿನಲ್ಲಿ) ಸಂಸಾರದ ದೃಶ್ಯಗಳು. ನಳಿನಿಯ ನೃತ್ಯ, ಅಹಳ ಸಂಗೀತ ಮುಂತಾದುವು. (ಹೀರೊ ಸುರೇಶ್ ಈಗಲೇ ಪ್ರವೇಶಿಸುವುದಿಲ್ಲ)....	೫೦೦
3.	ಸುರೇಶ್ ಮತ್ತು ನಳಿನಿಯ ಪ್ರೇಮ........ಅವರು ಬಾಂಬೆ, ಅಲಹಾಬಾದ್, ಡೆಲ್ಲಿ, ಸಿಂಗಪೂರ್, ಕಾನ್ಪೂರ್, ಲಕ್ನೊ ....ಮುಂತಾದುವನ್ನು ಒಟ್ಟಿಗೆ ನೋಡುವುದು....ಪ್ರೇಮಗೀತೆಗಳು (ಪ್ರೇಕ್ಷಕರಿಗೆ ತಲೆನೋವು ಬರಬಹುದು........ಆದ್ರೂ ಪರ್ವಾಯಿಲ್ಲ)	೩,೦೦೦
4.	ಅವರಿಬ್ಬರೂ ಬೊಂಬಾಯಿನಲ್ಲಿ ಸಿನಿಮಾ, ನಾಟಕ, ಸರ್ಕಸ್ ಇತ್ಯಾದಿಗಳನ್ನು ನೋಡುವುದು	೧,೦೦೦
5.	ನಳಿನಿಗೆ ಮದುವೆ ಗೊತ್ತಾದ ಮೇಲೆ ಇಬ್ಬರಿಗೂ ಆಗುವ ದುಃಖದ ದೃಶ್ಯಗಳು. ದುಃಖ ಪ್ರಲಾಪ (ಒಂದೆರಡು ಹಾಡುಗಳು) (ದುಃಖವಾಗೋದ್ರಿಂದ ಹಾಡುಗಳು ಸ್ವಲ್ಪ ನಿಧಾನ).	೧,೫೦೦
6.	ನಳಿನಿಯ ಮದುವೆ. ಯಥಾಪ್ರಕಾರ ರಿಸೆಪ್ಷನ್‌ಗೆ 'ಪಾರ್ಟೀ' ನೃತ್ಯ ಮತ್ತು ಪಂಕಜಮಲ್ಲಿಕ್ ಸಂಗೀತ.	೧,೬೦೦

7. ಜಮೀನ್ದಾರನಿಗೂ, ಅವನ ಮೊದಲನೆಯ ಹೆಂಡತಿ ಮಗ (ಕಮಲ್)ನಿಗೂ (ಅವನದು ಸ್ವಲ್ಪ ಪ್ರಗತಿ ಶೀಲ ಸ್ವಭಾವ) ಮದುವೆಯಾದನಂತರ ಆಗುವ ಕಹಿಯಾದ ವಾಗ್ವಾದಗಳು. ೧,೦೦೦

8. ಕಮಲ್ ಮತ್ತು ಸುರೇಶನ ಸ್ನೇಹ (ಕ್ರಿಕೆಟ್, ಕಾಲೇಜ್ ಮುಂತಾದೆಡೆಗಳಲ್ಲಿ) ೧,೦೦೦

9. ಕಮಲ್, ತಿಳಿಯದೆಯೆ ಸುರೇಶನು ಪ್ರೀತಿಸುತ್ತಿದ್ದ ಇನ್ನೊಬ್ಬ ಹುಡುಗಿಯನ್ನು ಪ್ರೀತಿಸುವುದು....ಸುರೇಶನ ದುಃಖ ಮತ್ತು ಸ್ನೇಹಿತನ ಮೇಲೆ ಸೇಡು ತೀರಿಸಿಕೊಳ್ಳುವುದು. ೧,೫೦೦

10. ಸುರೇಶನಿಗೆ ಎಲ್ಲಾ ಕಡೆಯಿಂದಲೂ ಅವಹೇಳನ. ಒಂದು ಹಾಡನ್ನು ಹೇಳಿ ಅವನು ಅನಂತದ (infinity) ಕಡೆ ಹೊರಡುವುದು. ೫೦೦

ಒಟ್ಟು ೧೨,೦೦೦

* * *

ನನಗೆ ಬಹಳ ಆಶ್ಚರ್ಯವಾಯ್ತು. "ಇನ್ನೂ ಅನೇಕ ಕಥೆಗಳನ್ನು ಇದೇ ರೀತಿ ಬರೆಯಿರಿ" ಎಂದು ಹುರಿದುಂಬಿಸಿ ಖರ್ಧಾರ್ ನನ್ನನ್ನು ಬೀಳ್ಕೊಟ್ಟರು.

ನಾನು ಕಥೆಯನ್ನು ಚಿತ್ರಕ್ಕೆ ಕೊಟ್ಟ ಅರ್ಧ ವರ್ಷದಲ್ಲೇ "ಸ್ಟೇಟ್ಸ್" ಚಿತ್ರಮಂದಿರದಲ್ಲಿ, ದೇವ್ ಆನಂದ್ ಮತ್ತು ಸೂರಯ್ಯಾ ಇವರ ಭೂಮಿಕೆಯಲ್ಲಿ, ನನ್ನ ಕಥೆ ಪ್ರದರ್ಶನಕ್ಕೆ ಬಂದಿತು. ಚಿತ್ರದ ಹೆಸರು "ನಳಿನಿ" ನನ್ನ ಜೊತೆಯಲ್ಲಿದ್ದ ನನ್ನ ಸ್ನೇಹಿತ ಚೆಲ್ಲಿ ನನ್ನ ಬೆನ್ನು ತಟ್ಟಿದ. ಅಂತೂ ಅನಾಯಾಸವಾಗಿ ೮-೧೦ ವಾಕ್ಯದ ಕಥೆ ೬,೦೦೦ ಕಮಾಯಿಸಿ ಕೊಟ್ಟಿತು !!!

—ನ. ಶೇ. ಲಕ್ಷ್ಮಣರಾವ್.

— o —

ಡಕಾಯ್ತೀಲಿ ಹೋಗ್ತಿದ್ದ ತಲೆ ಈಗ ಡಕೋಟಾದಲ್ಲೇ ಹೋಗಬಹುದಂತೆ.

ಮುನ್ಸಾಮಿ ಹರೋಹರ

ಮಧುರೆ ಪಟ್ಣದ್ಬೀದಿ ವ್ಯಾಗೆ
ಕೇಳ್ದಿ ಇದು ಸಾಮಿ–
ಹಳ್ಳಿ ಹೈದ ಮುನ್ಸಾಮೀದು
ಕತೆ ಕನ್ಸಾಮಿ.

"ಜೇಲ್ನಗ್ಗಿ ಹೊರ ಬಂದಿದ್ರೆ
ಹತ್ತಿ ಕರೆ ಸಿಕ್ತು–"
ಅಂತ ಯಾರೋ ಏನೋ ಅವಂ–
ಗ್ಹೇಳಿದ್ದೇ ಗೊತ್ತು

ಕಾಂಗ್ರೆಸ್ ಆಫೀಸ್ ಹುಡಕ್ಕ್ಯೋತ
ನಡೆದ ಮುನ್ಸಾಮಿ ;
ತಂತೀ ಕಡ್ದು ಹಳೀಕಿತ್ತ
ಘಾಟಿ ಆಸಾಮಿ !


ಅತ್ತ ಇತ್ತ ಕಣ್ಕಣ್ಬಿಡ್ತ
ನಡ್ದ ಷಾರೊಳ್ಗೆ–
ಬೋಲ್ಡು ಓದೋಕ್ಬಾರದ ಹೈದ
ಭಾರಿ ಷಾರೊಳ್ಗೆ !

ಲಾರಿ ಒಂದು ತೂರಿ ಬಂತು
ಭಾರಿ ಜೋರೋಳ್ಗೆ
ತಂತೀ ಕಂಬ ತರುಬಿಕೊಂಡು
ಹೋಯ್ತು ಕ್ಷಣದೊಳ್ಗೆ

ಜೀವ ಹಿಡ್ಕೊಂಡ್ ಅತ್ತ ಇತ್ತ
ನೆಗೆದ ಮುನ್ಸಾಮಿ
ತಂತೀ ಕಂಬ ತಲೇಗ್ಬಿತ್ತು-
ನೋಡು-ಕನ್ಸಾಮಿ !

ಹತ್ತೆ ಕರಿ ಹೊಡೆಯೋಕೆಂತ
ಹೋದ ಮುನ್ಸಾಮಿ
ಹತ್ತು ಮೊಳ ಹಳ್ಳ ದೊಳ್ಗೆ
ಹರೋ ಹರ ಸಾಮಿ.

—ಎ. ಎಸ್. ರಾಮಕೃಷ್ಣ.



ಭಿಕ್ಷೆ ಕೊಡದೇ ಇದ್ದರೆ ಬೋರ್ಡನ್ನ ಹೀಗೆ ತಿದ್ದಬಹುದೇ ?

ಸೋಲದ ಸರಸು

ಸರಸು ಸೋಲನ್ನೊಪ್ಪಿಕೊಂಡದ್ದನ್ನು ನಾನು ಕಂಡೇ ಅರಿಯೆ. ಮನಸ್ಸಿಗೆ ಯಾವುದಾದರೂ ಹಿಡಿದರೆ, ಅದನ್ನು ಮಾಡಿ ನೋಡಿ ಮುಗಿಸಿಯೇ ಬಿಡುವಳು. ಸೋತರೆ ಹಿಮ್ಮೆಟ್ಟುವ ಜೀವವೇ ಅಲ್ಲ ಅವಳದು. ಆಶಾ ವಾದಿತ್ವಕ್ಕೆ ಅಗ್ರಸ್ಥಾನ ಕೊಡಬಹುದು ಅವಳಿಗೆ!

ಅವಳದೊಂದು ವಿಶೇಷ ಗುಣ. ಅದೇನೆಂದರೆ, ಯಾವ ಪೇಪರಿನಲ್ಲಾಗಲೀ, ವಾರ ಪತ್ರಿಕೆ ಮಾಸ ಪತ್ರಿಕೆಯಲ್ಲಾಗಲೀ ಬಂದ ಅಪರೂಪವಾದ ಸುದ್ದಿಗಳಿಗೆ ಮಹತ್ವ ಕೊಡುವಿಕೆ!

ಮೈಲಾರಯ್ಯ ಮೇಜಿಗೆ ಮುಖ ಅಂಟಿಸಿ ಕೊಂಡು ಏನೋ ಬರೆಯುತ್ತ ಕುಳಿತಿದ್ದರಂತೆ. ಸರಸು ಸರಸರನೆ ಬಂದು, ಬಲಗಿವಿ ಹಿಡಿದು, ಸೂಜಿ ಚುಚ್ಚಿದರ್ರನೆ ದಾರ ಎಳೆದೇ ಬಿಟ್ಟಳಂತೆ ಮೈಲಾರಯ್ಯ ಚೀರಿ ಮುಗಿಸುವುದರೊಳಗೆ! "ಇದೇನೇ ಬಂತು ನಿನಗೆ? ಇಷ್ಟು ದಿನವೂ ಎಷ್ಟೋ ನಯ ವಿನಯವಾಗೇ ನಡಕೊಂಡು ಬಂದ್ಯಲ್ಲೇ!" ಎಂದು ಕಿವಿ ಕಿವಿ ಹಿಸಕಿಕೊಳ್ಳುತ್ತಾ ಕೇಳಿದರಂತೆ ಮೈಲಾರಯ್ಯ. ಇನ್ನೊಂದು ಕಿವಿಗಾಗಿ ಸೂಜಿ ದಾರ ತಯಾರುಮಾಡುತ್ತಿದ್ದ ಸರಸು, "ನೋಡಿ ಇಲ್ಲಿ!" ಎಂದು ಮಾಸ ಪತ್ರಿಕೆಯೊಂದನ್ನ ಅವರ ಮೂತಿಗೆ ಹಿಡಿದಳಂತೆ. ಅದರಲ್ಲಿ ಈ ರೀತಿ ಬರೆದಿದ್ದಿತಂತೆ:—

ಕಿವಿ ಚುಚ್ಚುವುದರಿಂದ ಕೇಳುವ ಶಕ್ತಿ ಕುದುರುವುದೆಂದು ಅಮೇರಿಕನ್ ವೈಜ್ಞಾನಿಕರು ಇತ್ತೀಚೆಗೆ ಕಂಡುಹಿಡಿದಿದ್ದಾರೆ. ಆದ್ದರಿಂದ ಕಿವಿ ಚುಚ್ಚುವ ಪೂರ್ವಿಕ ಪದ್ಧತಿಯನ್ನು ಅಲ್ಲಗಳೆಯಬೇಡಿ. ಅದು ಅತ್ಯಂತ ಲಾಭದಾಯಕ. ಕಿವಿಗೆ ವಜ್ರವಿಡುವುದರಿಂದಲಂತೂ, ಒಂದು ಬಗೆಯ ವಿದ್ಯುಚ್ಛಕ್ತಿ ಉತ್ಪನ್ನವಾಗಿ, ಗ್ರಹ ಕೇಂದ್ರಿಯನ್ನು ಜಾಗೃತಗೊಳಿಸುವುದು!........" ಪಾಪ. ಮೈಲಾರಯ್ಯನಿಗೆ ಮೊದಲಿಂದಲೂ ಮೊದ್ದುಗಿವಿ!

ಮೊನ್ನೆ ಸಿಕ್ಕಿದ್ದರು ಮೈಲಾರಯ್ಯ. ಮಾರಮಣನ ಮಾಪರ್ಾಡಿಗಾಗಿ ತುರುಕಿದ್ದ ಸರಸುವಿನ ವಜ್ರದ ಓಲೆ 'ಥಣಕ್ ಥಣಕ್'ನೆ ಮಿನುಗುತ್ತಿತ್ತು

ವೈಲಾರಯ್ಯನ ಕೊರೆದ ಕಿವಿಯಲ್ಲಿ! ಮಾರ್ಪಾಡು ಎಲ್ಲಿಯವರೆಗೆ ಸಾಗಿದೆಯೋ ನೋಡೋಣವೆಂದು "ಆಫೀಸಿನಿಂದ ಹಿಂದಿರುಗೋಣಾಗುತ್ತಿದೆಯೇನೋ" ಎಂದೆ ಸಾಮಾನ್ಯ ಸ್ವರದಲ್ಲಿ. "ಕಾಫೀನೂ ಇಲ್ಲ, ಕಷಾಯನೂ ಇಲ್ಲ ಇನ್ನೂ" ಎಂದು ಪ್ರತ್ಯುತ್ತರ ಬಂತು! "ಹೇಗಿದ್ದರೂ ಕ್ಲಬ್ಬಿಗೆ ಹೊರಟಿದ್ದೀರಲ್ಲಾ! ಅಲ್ಲೇ ಆಗುತ್ತೆ" ಎಂದೆ ಸ್ವಲ್ಪ ಜೋರಾಗಿ. "ಹುಂಃ ಹಬ್ಬವೇ! ಸಾಮಾನೆಲ್ಲ ತರಬೇಕೂಂತ ಜೇರೆ ಹೇಳಿ ಕಳಿಸಿದ್ದಾಳೆ ಅವಳು" ಎಂದರು. ಸುಸ್ತಾದೆ.

ಒಂದುಸಾರಿ, ಸರಸು ಯಾವುದೋ ಪೇಪರಿನಲ್ಲಿ ಓದಿದಳು; "ಫ್ರಾನ್ಸಿನಲ್ಲಿ ಹಾಡು ಹಾಲು ಹೆಚ್ಚಿಸುತ್ತದೆ ಎಂಬುದನ್ನು ಕಂಡುಹಿಡಿದಿರುವರು. ಸಂಗೀತವನ್ನಾಲಿಸುತ್ತಿರುವ ಹಸುಗಳು ಹೆಚ್ಚಿಗೆ ಹಾಲು ಕರೆಯುತ್ತವೆ. ಆದ್ದರಿಂದ ಅಲ್ಲಿನ ಅನೇಕ ಗೋಮಾಳಗಳಲ್ಲಿ ಇತ್ತೀಚೆಗೆ ರೇಡಿಯೋ ಏರ್ಪಾಡಿಟ್ಟಿದ್ದಾರೆ" ಎಂದು. ಸರಸೂಗೆ ಸ್ಫೂರ್ತಿ ಉಕ್ಕಿತು. ಇನ್ನೂರೈವತ್ತಿಟ್ಟು ತಂದ ಸೀಮೇ ಹಸು ಸೇರು ಹಾಲು ನೆಟ್ಟಗೆ ಕೊಡುತ್ತಿಲ್ಲ. ಸಧ್ಯ ಹಾಲು ಹೆಚ್ಚಿಸುವ ಮಾರ್ಗ ಸುಗಮವಾಯಿತಲ್ಲಾ ಎಂದು ಸಂತೋಷಿಸಿದಳು. ರೇಡಿಯೋ ಏನೋ ಅವಳ ಮನೆಯಲ್ಲಿಲ್ಲ; ಇಲ್ಲದಿದ್ದರೇನು? ಅವರಪ್ಪ ಅಮ್ಮ ಅವಳಿಗೂ ತಾಳಿ ಕಟ್ಟಿಸುವವರೆಗೂ ಹಾರ್ಮೋನಿಯಂ ಮೇಷ್ಟ್ರಿಗೆ ಹಣ ತೆತ್ತಿರಲಿಲ್ಲವೆ?

ಅಟ್ಟದಿಂದ ಅವತರಿಸಿತು ಹಾರ್ಮೋನಿಯಂ. ಧೂಳನ್ನು ವರೆಸಿ, ಜಿರಲೆ ಸಂಸಾರಗಳನ್ನು ಆಚೆಗೆ ಸಾಗಿಸಿ, ಸಿದ್ಧಮಾಡಿಕೊಂಡಳು. ಸಂಜೆ ಆಳು ಹಾಲು ಕರೆಯಲು ಕುಳಿತ, ಹಸುವಿನ ಹಟ್ಟಿಯ ಬಾಗಿಲಲ್ಲಿ ಕುಳಿತು ಹಾರ್ಮೋನಿಯಂ ತಿದಿ ಒತ್ತಿದಳು. "ಬಿಡೇ ನಿನ್ನ ಪಾದವ, ಬಿಂಕವಿದೇಕೇ........" ಶೃತಿಯತ್ತಿದಳು. ಹಸು, ಪಾದ ಒಂದು ಬಾರಿ ಝಾಡಿಸಿತು. "ಕೊಡೂ ಮನೋಭೀಷ್ಟವಾ, ಕೋಪವಿದೇಕೇ........" ಹಾಡು ಮುಂದೆ ತೇಲಿತು. ಹಾಲು ಕೊಡುವುದು ಹಾಗಿರಲಿ, ಹಸುವಿನ ಕೋಪ, ಪ್ರಕೋಪಿಸಿ, ಹಾಲಿನ ಪಾತ್ರೆ ಆಳಿನ ಕೈಯಿಂದ ಆರು ಮಾರು ಆಚೆ ಉರುಳಿತು! "ಕೋರೆಯ ವೊಸಗೀ, ಕೊಸರಿ ಕೊಂಡರೂ ಬಿಡೇ........" ಕೊಂಬಿನಿಂದ ಆಳನ್ನು ತಿವಿದದ್ದೊಂದೇ ಅಲ್ಲ, ಹಗ್ಗ ಹರಿದು ಉದ್ರೇಕಗೊಂಡ ಹಸು ಹಾರಿ ಓಡಿದ ರಭಸದಲ್ಲಿ ಹಾರ್ಮೋನಿಯಂ ಮೇಲೆ ಸರಿಯಾಗಿ ನಾಲ್ಕು ಪಾದಗಳೂ ನಟ್ಟು ಹೋದವು! ಬಡಪಾಯೀ ಹಾರ್ಮೋನಿಯಂ ಒಂದೇ ಬಾರಿ ಸಪ್ತ ಸ್ವರಗಳಲ್ಲೂ ನರಳಿ, ಲಟಲಟನೆ ತಣ್ಣಗಾಯಿತು! ದೈವವಶಾತ್ ದೂರ ಸರಿದ ಸರಸುವಿನ ಸೀರೆ ಮಾತ್ರ ಸೀಳಿತು ಅಷ್ಟೆ.

ಹೊಸ ಪ್ರಯೋಗ, ಹೊಸ ಉದ್ಯಮಗಳಲ್ಲಿ ನಿತ್ಯ ನಿರತಳು ಸರಸು. 'ಸುಮಂಗಲಿ', 'ಸ್ತ್ರೀ ಶಕ್ತಿ', 'ಅಭಗಿನಿ' ಮೊದಲಾದ ಮಾಸ ಪತ್ರಿಕೆಗಳಲ್ಲೂ

ರೇಡಿಯೋದಲ್ಲೂ ಓದಿದ, ಕೇಳಿದ, ನಳಪಾಕಗಳನ್ನ ತಯಾರಿಸದಿದ್ದರೆ ಅವಳಿಗೆ ತೃಪ್ತಿಯೇ ಇಲ್ಲ! 'ಏನಡಿಗೆ' ಕಾರ್ಯಕ್ರಮ ಪಕ್ಕದ ಮನೆಯಲ್ಲಿ ಬರುವ ಹೊತ್ತಿಗೆ ಸರಿಯಾಗಿ, ಕಾಗದ ಪೆನ್ಸಿಲ್ ಸಹಿತ ಇವಳು ಸಿದ್ಧ!

ಅವಳ 'ನಳಪಾಕ'ದ ಪ್ರಯೋಗ ಪ್ರತಿ ಶನಿವಾರ ಭಾನುವಾರ. ಗೆಣಸಿನ ಗುಳಪಾವಟಿ, ತೌಡಿನ ಹಲ್ವಾ, ಮುಸುಕಿನ ಜೋಳದ ಮೈಸೂರ್ಪಾಕು, ಬನಾನಾ ಬನ್ನು, ಕಡ್ಲೇಕಾಯಿ ಕೋಡ್ಬಳೆ, ಇತ್ಯಾದಿ ಇತ್ಯಾದಿ! ಆ ತಿಂಡಿಗಳನ್ನು ಸೂಚಿಸಿದವರು, ಅವನ್ನು ತಾವು ತಯಾರಿಸಿ ನೋಡಿರುವರೋ ಇಲ್ಲವೋ! ಅಥವಾ ಅವರು ಹೇಳಿದ ಹೊಟ್ಟು ಹಿಟ್ಟಿನ ಪ್ರಮಾಣದಲ್ಲಿ ಸರಸು ಏನು ವ್ಯತ್ಯಾಸ ಮಾಡುತ್ತಿದ್ದಳೋ, ಅಂತೂ ಇಂತೂ ನೆಟ್ಟಗಾದ ದಿನವೇ ಇಲ್ಲ! ಮೂರು ವರ್ಷವಾಯಿತಂತೆ ಪಾಪ, ಪೈಲಾರಯ್ಯ ಹೆಸರುಳ್ಳ ತಿಂಡಿ ತಿಂದು! ಹೆಂಚಿನ ಮುರುಕು, ಬೆಂಡಿನ ಮೊಂಡು, ಸೀ ಗುಂಡು, ಬೆಲ್ಲದ ಬಿಲ್ಲೆ, ಘಾಟಿನ ಚೂರ್ಣ, ಇಂಥವೇ ನಾನು ಪ್ರತಿ ರಜಾ ದಿನ ತಿನ್ನುವುದು ಎಂದು ಹೇಳಿಕೊಂಡರಂತೆ!

ಸರಸುವಿನ 'Latest' ಈಗ "ಹೆಚ್ಚು ಆಹಾರ ಬೆಳವಣಿಗೆ!" "ಮಹಿಳಾ ಮಣಿಯರು ಸೇರಿ ಮಹಾ ಸಭೆ ನಡೆಸಿದರಂತೆ; ಮಹಾರಾಣಿಯವರೇ ಪೋಷಕರಾಗಿರುವರಂತೆ; ಮುಖ್ಯ ಮಂತ್ರಿಯವರ ಧರ್ಮಪತ್ನಿಯವರಿಂದ ಹಿಡಿದು 'ಬಡೀ ಬಡೀ' ಎಲ್ಲರೂ ಮುನ್ನುಗ್ಗಿ, ಟೊಂಕಕಟ್ಟಿ ನಿಂತಿರುವರಂತೆ!....ಮಾತೆಯೊಬ್ಬರು ಹೊಟ್ಟನ್ನೇ ಮೊಮ್ಮಕ್ಕಳಿಗೆ ಕೊಡುತ್ತಾರಂತೆ, ಮತ್ತೋರ್ವರು ಮರಗೆಣಸನ್ನೇ ಮುಖ್ಯಾಹಾರವಾಗಿ ಬಳಸುತ್ತಿರುವರಂತೆ!........ಇತ್ಯಾದಿ" ಓದಿದಳು ಪೇಪರಿನಲ್ಲಿ.

ನಾನು ಇಷ್ಟು ದಿನ. ಹೀಗೇ ವೃಥಾ ಕಾಲಹರಣ ಮಾಡಿದೆನೇ ಎಂದು ಮಮ್ಮಲ ಮರುಗಿದಳು. ಸರಸು.

'ಹೆಚ್ಚು ಆಹಾರ ಬೆಳವಣಿಗೆ' ಪ್ರಯೋಗ ಪ್ರಾರಂಭವಾಯಿತು. ದನದ ಕೊಟ್ಟಿಗೆಯ ಮುಂದಿರುವ ಆರಡಿ ಚದರದಲ್ಲಿ ಅರವತ್ತು ಪಾತಿ ಅಗೆದಳು. ನಾನಾ ವಿಧವಾದ ಬೀಜಗಳನ್ನು ನೆಟ್ಟಳು. ಸಗಣಿ ಬೆರಣಿ ಕುಕ್ಕೆಗಳಿಗೂ, ತರಕಾರಿ ತಟ್ಟಿಗಳಿಗೂ ಗಿಡ ಮಹೋತ್ಸವವಾಗಿ, ಕೊಟ್ಟಿಗೆಯ ಸೂರಿನ ಮೇಲೆ ಕುಳಿತುವು. ಮಣ್ಣು ಬೀಜಗಳುಳ್ಳ ಮಡಿಕೆಗಳು, ಸಮರಕ್ಕೆ ಹೊರಟ ಸಿಪಾಯಿಗಳಂತೆ, ಸಾಲಾಗಿ ನಿಂತವು ಅಂಗಳದ ಗೋಡೆಯಮೇಲೆ!

ನಿನ್ನೆ ಹೋಗಿದ್ದೆ ಅವರ ಮನೆಗೆ. ಹಾಗೇ ಅಂಗಳಕ್ಕೆ ತಂಗಿದೆ. ಕುಕ್ಕೆಗಳ ಕೆಳಗಿಂದ ಬಂದ ಗೆದ್ದಲು ಕುಕ್ಕೆಗಳನ್ನು ಕಾಲುಭಾಗ ಕಾಣುವಷ್ಟು ಮಾತ್ರ ಬಿಟ್ಟಿತ್ತು; ಕೊಟ್ಟಿಗೆಗೆ ಹಬ್ಬ ಹೋಗಿದ್ದ ಹೀರೆಬಳ್ಳಿ ಹಸುವಿನ ಬಾಯಿಗೆ

ಹೋಗಿತ್ತು; ಕೋತಿಗಳ ಕಾಲ್ತುಂಡಾದ ಮಡಿಕೆಗಳ ತುಂಡುಗಳು, ಎಲ್ಲೆಲೂ ಉರುಳಾಡುತ್ತಿದ್ದುವು!


"ಅಲ್ಲಿ ನೋಡಿದೆಯಾ! ಮೆಂತ್ಯ, ಮರಗೆಣಸು, ಎಲ್ಲ ಹೇಗೆ ಸೋಲಿದ್ದಿವೆ!" ಎಂದು ಅರಳ್ಗಣ್ಣುಗಳಿಂದ ತೋರಿಸಿದಳು ಸರಸು. "ಅಲ್ಲಿ ನೋಡಿದೆಯಾ ನಂದನ ವನ" ಎಂಬ ಧಾಟಿಯಿತ್ತು ಅವಳ ಧ್ವನಿಯಲ್ಲಿ! ಅವಳ ಕೈಯನ್ನೇ ಅನುಸರಿಸಿ ಹುಡುಕಿದೆ. ರೇರ್ಷ ಕಾಲದ ಗುಬ್ಬಚ್ಚಿಗಳು ತಿಂದುಳಿದ ಮೆಣಸಿನ ಕಾಯಿ, ಕೊತ್ತಂಬರಿ ಮೆಂತ್ಯದ ಕಾಳುಗಳು ಹುಟ್ಟಿಕೊಂಡು ಅಲ್ಲೊಂದು, ಇಲ್ಲೊಂದು ಅಜ್ಜಿಯ ಬಾಯಿ ಹಲ್ಲುಗಳಂತೆ, ಕಾಣಿಸಿದುವು! ಅಗಲವಾದ, ಆರೂವರೆ ಹರಕೆಲೆಗಳು ಕಂಡದ್ದರಿಂದ, ಅವೇ ಮರಗೆಣಸಿನ ಗಿಡ (ಮರ?) ಗಳಿರಬಹುದೆಂದುಕೊಂಡೆ!

"ಕಾಣಿಸಲಿಲ್ಲವೇ?.......ಮಳೆಗಾಲಕ್ಕೆ ಮನೆಯೆಲ್ಲ ಹಸರಾಗುತ್ತೆ. ತರಕಾರಿ ತಾಪತ್ರಯ......."

"ಹೌದ್ಹೌದು" ಎಂದು ತಲೆಯಲ್ಲಾಡಿಸಿದೆ, ಏನಾದರೂ ಅರ್ಥವಾಗಲಿ ಎಂದು!

—ಟಿ. ಸುನಂದಮ್ಮ.

—— 0 ——



ವಿರಾಮಕ್ಕೆ ಹೊರಗೆ ಬಂದೋರೆಲ್ಲಾ ಧೂಮಪಾನಕ್ಕೇನೆ?

★ ಎಲ್ಲೇ! ಕತ್ತರಿ!! ★

"ಎಲ್ಲೇ ! ಕತ್ತರಿ !" ಅಂತ ಕೂಗಿದೆ.

"ನಂಗೇನ್ಗೊತ್ತು !" ಅಂತ ಅಡಿಗೆ ಮನೆಯಿಂದ ಮಾರ್ದನಿ ಬಂತು.

*   *   *   *

ಸೇಬಿನ ಹಣ್ಣಿನ ಚಮ್ಡಾವನ್ನು ನನ್ನ ಉಗುರಿನಿಂದ ಸುಲಿಯುತ್ತಿದ್ದೆ. ಆ ಸೇಬು ಕಾಶ್ಮೀರದಿಂದ ಬಂದಿದ್ದು. ಸಮುಸ್ಯೆ ಬಲು ಕಠಿಣವಾದ ಊರು. ಹಣ್ಣಿನ ಸಿಪ್ಪೆಯೂ ತಥಾ ರೂಪಿ. ನಾಲ್ಕು ಅಂಗುಲ ಸುಲಿದಿರಬಹುದು. ಉಗುರು ಸ್ವಲ್ಪ ಸೀಳಿತು. ಬಾಯಿನ ಹತ್ತಿರಕ್ಕೆ ಕೈ ಹೋಗತೊಡಗಿತು. ಸಿಪ್ಪೆ ತಿನ್ನಲಿಕ್ಕಲ್ಲ. ನೋವು ಕಡಿಮೆಯಾಗಲಿ ಅಂತ ನಾದ ಬ್ರಹ್ಮನನ್ನು ಹೊರದೂಡಿಸಲು. ಆಗಲೇ ಯೋಚನೆ ಹೊಳೆದಿದ್ದು ಕತ್ತರಿಯಿಂದ ಎದ್ದ ಉಗುರ ಚೂರನ್ನ ಕತ್ತರಿಸಿದರೆ ನೋವು ಕಡಿಮೆಯಾಗಬಹುದು ಮುಂದಕ್ಕೆ ಕಷ್ಟ ಬಾರದೇ ಇರಬಹುದು ಅಂತ.

ನಮ್ಮನೆಯಲ್ಲಿ ಮೂರು ಕತ್ತರಿ ಜೋಡಿಗಳಿವೆ. ಒಂದು ದೊಡ್ಡದು ಗಿಡ ಬಳ್ಳಿ ಕತ್ತರಿಸುಕ್ಕೆ ಅಂತ ತಂದಿದ್ದು. ಅದು ಈಗ ಮುಕ್ಕು ಹಿಡಿದು, ತುಕ್ಕು ಹಿಡಿದು, ಲಾಯದಲ್ಲಿ ಇದೆ. ಕುದುರೇಗೆ ಚೌಲ ಮಾಡೋವಾಗ ಅದನ್ನು ಉಪಯೋಗಿಸುತ್ತೇವೆ.

ಇನ್ನೊಂದು ಜತೆ ಕತ್ತರಿ ಇದೆ. ಅದೂ ಸ್ವಲ್ಪ ದೊಡ್ಡದೇ ! ಅದನ್ನು ಬಟ್ಟೆ ಕತ್ತರಿಸುಕ್ಕೇ ಅಂತ ಕೊಂಡುಕೊಂಡಿದ್ದೆವು. ಈಗ ಗಣಪತಿ ಹಬ್ಬದಲ್ಲಿ, ನವರಾತ್ರಿ ಹಬ್ಬದಲ್ಲಿ, ಕಾಗದದ ಮಂಟಪ ನಿರ್ಮಿಸೋವಾಗ, ವರತರೀಕು ಕತ್ತರಿಸೋವಾಗ, ಉಪಯೋಗಿಸುತ್ತೇವೆ. ಒಂದು ಸಲ ಏನೋ ಹುಚ್ಚು ಧೈರ್ಯಮಾಡಿ ಆ ಕತ್ತರೀಲಿ ರಟ್ಟನ್ನು ತುಂಡು ಮಾಡಲೆತ್ನಿಸಿದೆ. ಆಗ ಕತ್ತರಿಯ ಒಂದು ಕಾಲಿನ ತುದಿ ಲಟಕ್ಕಂತ ಮುರಿದುಹೋಯಿತು. ಜಪಾನ್ ಕತ್ತರಿ. ಹುಷಾರಾಗಿಲ್ಲದೇ ಇದ್ದರೆ ಎರಡೂ ಕಾಲು ಎಲ್ಲಿ ಮುರಿದು ಹೋಗುತ್ತೋ ಅಂತ ಅದನ್ನ ಹಬ್ಬದ ಮಂಟಪದ ಕಾಗದದ ಉಪಯೋಗಕ್ಕೆ ಮೀಸಲಾಗಿ

ರಿಸಿದ್ದೇವೆ. ದೇವರ ಮುಂದಾಸನದಲ್ಲಿ. ಅದು ನಮ್ಮ ನಿತ್ಯ ಜೀವನಕ್ಕೆಸಿಗುಲ್ಲ. ಅಷ್ಟು ಮಡಿ.

ಮಿಕ್ಕಿದ್ದೊಂದು ಇದೆ. ಜರ್ಮನ್ ಕತ್ತರಿ. ಎರಡು ಅಲುಗುಗಳೂ ಸೇರುವ ಕಡೆ, ಒಂದು ತಿರುಪಳಿ ಇದೆ ಈ ಕತ್ತರಿಯಲ್ಲಿ. ಬಲು ನಾಜೂಕಾದ ತಿರುಪಳಿ. ನಾಲ್ಕು ಸಾರಿ ಕತ್ತರಿಯನ್ನು ಲಕ್ ಲಕ್ ಎಂದರೆ ಆ ತಿರುಪಳಿ ನುಸುಳಿಕೊಂಡು ಮೇಲಕ್ಕೆ ಬರುತ್ತದೆ. ಅದನ್ನು ಹಿಂತಿರುಗಿಸುಕ್ಕೆ ತುಪ್ಪದ ಮಿಳ್ಳೆಯ ಹಿಡಿಯೇ ಬೇಕು. ಆ ಮಿಳ್ಳೆ ಇಟ್ಟು ಕೊಂಡೇ ಈ ಕತ್ತರಿ ಉಪಯೋಗಿಸಬೇಕು.

ನನ್ನ ಉಗುರಿಗೆ ಈ ಕತ್ತರಿಯೇ ಧನ್ವಂತ್ರಿ.

ಸಾಮಾನ್ಯವಾಗಿ ಇದನ್ನು ನನ್ನ ಮೇಜಿನಮೇಲೆ ಗಡಿಯಾರದ ಪಕ್ಕದಲ್ಲಿ ಇಡುವ ವಾಡಿಕೆ. ಗಡಿಯಾರ, ಕತ್ತರಿ, ಫೌಂಟೆನ್ ಪೆನ್ನು, ಜನಿವಾರ, ಮಸೀ ಕುಡಿಕೆ. ಈ ರೀತಿಯಾಗಿ.

ಆದರೆ ಇವತ್ತು ಕತ್ತರಿ ಅಲ್ಲಿಲ್ಲ!

* * * *

ಅದಕ್ಕೇ ಕೂಗಿದ್ದು. "ಲೇ! ಕತ್ತರಿ ಎಲ್ಲೇ!" ಅಂತ. ನಂಗೊತ್ತು. ನನ್ನಾಕೆ, ಕೋಸುಗಡ್ಡೆ ಕುಯ್ಯಲಿಕ್ಕೋ, ಮಕ್ಕಳ ಬಂಗುರದ ಚಾಟೀಗೆ ದಾರ ಸರಿಮಾಡಲಿಕ್ಕೋ, ಆ ಕತ್ತರಿಯನ್ನು ತೆಗೆದಿರುತ್ತಾಳೆ ಅಂತ. ಆ ಕತ್ತರಿಯಂತೇ ನಮ್ಮ ಸಂಸಾರ ಕೂಡ ನಾಲ್ಕು ಹೆಜ್ಜೆ ಮುಂದುವರಿಯೋ ಹೊತ್ತಿಗೆ ತಿರುಪಳಿ ಹೊರಬಂದು, ಇನ್ನೇನು ಸಂಸಾರ ಘಾತವಾಯ್ತು ಅನ್ನೋಹಾಗೇ ಆಗಿರುತ್ತೆ. ಆದರೆ ಕೋಪ ಶಮನ ಮಾಡಿಕೊಂಡು ಮಿಳ್ಳೆಯಿಂದ ತಿರುಪತಿ ತಿರುಗಿಸಿ ಸಂಸಾರ ಚಕ್ರ ಮುಂದುವರಿಸುತ್ತೆ.

* * * *

ಇನ್ನೊಂದುಸಾರಿ ಕೂಗಿದೆ. ಈ ಸಾರಿ ನನ್ನಾಕೆಯೇ ಪ್ರತ್ಯಕ್ಷವಾದಳು.

"ಎಲ್ಲೇ ಕತ್ತರೀ !"

"ನಂಗೇನ್ಗೊತ್ತು !"

"ಇಲ್ಲೇ ಇಟ್ಟಿದ್ದೆನಲ್ಲೇ !" ಮೇಜು ತೋರಿಸಿದೆ.

"ನೀವು ಇರೋವಾಗ ನಂಗ್ಯಾಕೆ ಕತ್ತರಿ."

ಓಹೋ! ಆಕೆ ರೇಗಿದ್ದಾಳೆ. ಇನ್ನು ನಾನು ಸಾವಧಾನವಾಗಿರಬೇಕು. ಇಲ್ಲಿದಿದ್ದರೆ ಸಂಸಾರ ಘಾತ ಎಂದು ಹೊಳೆಯಿತು—'ಶ್ರಾವರ ಮನೆ' ಭೀತಿ ಕಾಳಿಸಿತು.

"ಅಲ್ಲಾ ಕಣೇ! ನಿಂಗೆ ಗೊತ್ತಿಲ್ಲವೇ"

"ನೀವೇ ಅಂದರಲ್ಲಾ ಎಲ್ಲೋ ಮುಚ್ಚಿಡ್ತೀನಿ. ನನ್ನ ಕೈಗೆ ಸಿಗದಹಾಗೆ ಅಂತ!"

ದಿಟ! ಯಾರ ಕೈಗೂ ಸಿಗಬಾರದು ಅಂತ ನಾನೇ ಎಲ್ಲೋ ಮುಚ್ಚಿಟ್ಟ ಜ್ಞಾಪಕ! ತಲೆ ಕೆರೆದೆ. ಮುರಿದ ಉಗುರನ್ನ ಚೀಪಿದೆ. ಆಹಾ! ಭಗವದ್ಗೀತೆ ಪುಸ್ತಕದಲ್ಲಿ ಮುಚ್ಚಿಟ್ಟಿದ್ದೆ. ಹುಡುಕಿದೆ. ಸಿಕ್ಕಿತು. ಆದರೆ ನೋಡಿ ಹೆಂಗಸರು ಇಂಥಾದನ್ನು ಮರೆಯೋದೇ ಇಲ್ಲ!!



ಹಳೇ ಬೋರ್ಡ್ ಹಳೇ ಲಾಯರದೇ ಇರಬೇಕು.
ಅವರ ಹತ್ತಿರವೇ ಹೋಗೋಣ ಕಣೋ!

ನನ್ನ ಮನೆಯ ರಾಜಕೀಯ!

ನನ್ನ ಮನೆ ಶುದ್ಧ ರಾಜಕೀಯ ಕ್ಷೇತ್ರವಾಗಿಬಿಟ್ಟಿದೆ. ಮನೆಯಲ್ಲಿ ಎರಡು ಮೂರು ಪಾರ್ಟಿಗಳು. ಯಾವಾಗಲೂ ನಾಯಿಗಳಂತೆ ಕಚ್ಚಾಡುತ್ತಿರುತ್ತಾರೆ. ಗಂಡ ಹೆಂಡರ ಜಗಳ, ಅತ್ತೆಯ ಪ್ರತಿಭಟನೆ, ಸೊಸೆಯ ಮುಷ್ಕರ, ಅಳಿಯನ ಅಪಪ್ರಚಾರ, ರಗಳೆ ರಾದ್ಧಾಂತಗಳು ಇದ್ದೇಇರುತ್ತೆ. ಮಗ ಸುತ್ತಿಗೆ, ಕುಡು ಗೋಲು ಹಿಡಿದುಕೊಂಡು ಹೊಸಚಳುವಳಿ ಪ್ರಾರಂಭಿಸಿದಾನೆ. ಒಬ್ಬರನ್ನ ಇನ್ನೊಬ್ಬರು ಟೀಕೆ ಮಾಡುವುದಂತೂ ಸರ್ವಸಾಮಾನ್ಯವಾಗಿದೆ. ತದ್ವತ್ ಪ್ರತಿನಿಧಿ ಸಭೆಗಳ ವಾತಾವರಣ!

ಎಲ್ಲರೂ ಸ್ವಾತಂತ್ರ್ಯ, ಸಮಾನತೆ, ವ್ಯಕ್ತಿಗೌರವ, ಹಕ್ಕುಭಾಧ್ಯತೆ ಅಂತ ಬೊಬ್ಬೆ ಹೊಡೆಯುತ್ತಾರೆ. ತಾಮುಂದು, ನಾಮುಂದು ಎಂದು ಪೈಪೋಟಿ ನಡೆಸುತ್ತಾರೆ. ಕೂತಲ್ಲೇ ನಿಂತಲ್ಲೇ ಭಾಷಣ ಬಿಗಿಯುತ್ತಾರೆ. "ನಮ್ಮದು ವಿರೋಧ ಪಕ್ಷ, ನಮ್ಮ ಸಲಹೆ ತೆಗೆದುಕೊಳ್ಳಿ" ಎಂದು ಕೂಗುತ್ತಾರೆ. ಓಟಿಗೆ ಹಾಕಿ ಎನ್ನುತ್ತಾರೆ. ಅವನು ಹುಚ್ಚು ಹುಚ್ಚಾಗಿ ಘೋಷಣೆಗಳನ್ನು ಕೂಗಿ ಕೊಳ್ಳುತ್ತಾನೆ. "ಕ್ರಾಂತಿ, ಕ್ರಾಂತಿ" ಎಂದು ಕಿರುಚುತ್ತಾನೆ! "ಬಾಯಿ ಮುಚ್ಕೊ" ಅಂದರೆ "ಫ್ರೀಡಂ ಆಫ್ ಸ್ಪೀಚ್, ಫ್ರೀಡಂ ಆಫ್ ಎಕ್ಸ್‌ಪ್ರೆಶನ್" ಅಂತ ಹಾರಾಡಿ ನನ್ನ ಬಾಯಿ ಮುಚ್ಚಿಸುತ್ತಾನೆ ಬಾರಿಬಾರಿಗೂ "ಹಿಂದೂ ಕೋಡ್ ಬಿಲ್" ಜ್ಞಾಪಿಸುತ್ತಿರುತ್ತಾಳೆ ನನ್ನ ಅರ್ಧಾಂಗಿ, ದಂಡೋದರಿ! ಇವೆಲ್ಲ ನೋಡಿ ನನಗೂ ಒಂದೊಂದು ಸಲ ರೇಗಿಹೋಗುತ್ತೆ, ಆಗ ನಾನು ರೂಲಿಂಗ್ ಕೊಟ್ಟುಬಿಡುತ್ತೇನೆ ಅನ್ನಿ!

ಆಫೀಸಿಗೆ ಹೊತ್ತಾಗಿ, ಅಡಿಗೆ ಇನ್ನೂ ಆಗದೆ ಇರುವಾಗ ನನಗೂ, ನನ್ನ ಅರ್ಧಾಂಗಿಗೂ ಈ ಕೆಳಗೆ ಕಂಡಂತೆ ಬಿಸಿಬಿಸಿ ಚರ್ಚೆ ನಡೆಯುತ್ತದೆ—

ನಾನು:—ಈಗ ಗಂಟೆ ಎಷ್ಟು ಎಂಬುದು ಗೊತ್ತೆ?
ಅವಳು:—ನಿನ್ನೆ ಡಿಪೋಯಿಂದ ತಂದ ಸೌದೆ ಹಸಿ ಎಂಬುದು ಗೊತ್ತೆ?
ನಾನು:—ಗೊತ್ತು.

ಅವಳು:—ಹಸಿ ಸೌದೆ ತರಲು ಕಾರಣವೇನು?

ನಾನು:—ಕಾರಣಗಳಿವೆ.

ಅವಳು:— ಯಾವ ಕಾರಣಗಳು?

ನಾನು:—ಹಸಿ ಸೌದೆ ತರಲು ಇದ್ದ ಕಾರಣಗಳು.

ಅ:—ಸ್ತ್ರೀ ಸ್ವಾತಂತ್ರ್ಯಕ್ಕೆ ಭಂಗ ತರುತ್ತಿದೀರಿ!

ನಾ:—ಆ ಉದ್ದೇಶ ಇಲ್ಲ.

ಅ:—ಹಾಗಾದರೆ ಹಸಿ ಸೌದೆ ತರಲು ಇದ್ದ ಕಾರಣಗಳನ್ನು ತಿಳಿಸಿ.

ನಾ:—ತಿಳಿಸಲು ಸಾಧ್ಯವಿಲ್ಲ.

ಅ:—ಹಸಿ ಸೌದೆ ಒದಗಿಸುವುದರ ಮೂಲಕ ಸೇಡು ತೀರಿಸಿಕೊಳ್ಳುವ ಪ್ರಯತ್ನ ನಿಮ್ಮದು ಎಂದು ಊಹಿಸೋಣವೇ?

ನಾ:—ನಿಮ್ಮ ಊಹೆಗೆ ಬುಡವಿಲ್ಲ.

ಅ:—ಹಾಗಾದರೆ ಹಸಿ ಸೌದೆ ತರಲು ಒದಗಿದ ಪರಿಸ್ಥಿತಿ ಯಾವುದು?

ನಾ:—ಹಸಿ ಸೌದೆ ತರುವಂತಹ ವಿಶೇಷ ಪರಿಸ್ಥಿತಿ.

ಅ:—ನಿಮ್ಮ ದೃಷ್ಟಿಯಲ್ಲಿ ಅಂತಹ ವಿಶೇಷ ಪರಿಸ್ಥಿತಿ ಏರ್ಪಟ್ಟಿತ್ತೆ?

ನಾ:—ಪ್ರಶ್ನೆ ಸ್ಪಷ್ಟವಾಗಿಲ್ಲ.

ಅ:—ಯಾರ ದೃಷ್ಟಿಯಲ್ಲಿ ಅಂತಹ ಪರಿಸ್ಥಿತಿ ಏರ್ಪಟ್ಟಿತ್ತು ಎಂಬುದು ನನ್ನ ಪ್ರಶ್ನೆ.

ನಾ:—ಸೌದೆ ತಂದವರ ದೃಷ್ಟಿಯಲ್ಲಿ!

ಅ:—ಅವರ ದೃಷ್ಟಿಯಲ್ಲಿದ್ದ ಪರಿಸ್ಥಿತಿ ಎಂತಹುದು?


ನಾ:—ಹಸಿ ಸೌದೆ ತರುವಂತಹ ವಿಶೇಷ ಪರಿಸ್ಥಿತಿ.

ಈ ರೀತಿ ದಿನಂಪ್ರತಿ ಬಿಸಿಬಿಸಿ ಚರ್ಚೆಗಳು, ಪ್ರಶ್ನೋತ್ತರಗಳು ನಡೆಯುತ್ತಲೇ ಇರುತ್ತೆ. ನಮ್ಮ ಸಂಸಾರದ ಆಡಳಿತ ಕ್ರಮವೂ ಹೀಗೇನೇ. ಒಬ್ಬರು ಹೇಳಿದ್ದು ಇನ್ನೊಬ್ಬರು ಕೇಳುವುದಿಲ್ಲ. ಎಲ್ಲರೂ ತಮ್ಮ ತಮ್ಮ ಮೂಗಿನ ನೇರಕ್ಕೇ ಮಾತಾಡುತ್ತಾರೆ. ವಕ್ರ ವಕ್ರವಾಗಿ ವಾದಿಸುತ್ತಾರೆ. ಒಬ್ಬರು ಮಾತಾಡುತ್ತಿರುವಾಗಲೇ ಇನ್ನೊಬ್ಬರು ಎದ್ದು ಕೂಗುತ್ತಾರೆ! ಮಗಳಿಗೆ ಮದುವೆ ಮಾಡಿ ಎಂದು ಮಸೂದೆ ಮಂಡಿಸುತ್ತಾರೆ! ಅಳಿಯನ ಅವಾಂತರ ಅಡಗಿಸಲು ಅವಸರದ ಠರಾವು ತರುತ್ತಾರೆ! ಸೊಸೆ 9 ಗಂಟೆ ತನಕ ಮಲಗುವುದನ್ನು ತಪ್ಪಿಸಿ ಎಂದು "ಪಾಯಿಂಟ್ ಆಫ್ ಆರ್ಡರ್" ಎತ್ತುತ್ತಾರೆ! ಬೇಳೆ ಬೇಯುವುದಿಲ್ಲವೆಂದು ಕಟ್‌ಮೋಶನ್ ತರುತ್ತಾರೆ! ನಿತ್ಯಗಟ್ಟಲೆಗೆ ಸಿಲುವಳಿ ಸೂಚನೆ ಸೂಚಿಸುತ್ತಾರೆ!

ನಾನೂ ಅಷ್ಟೆ! ಹೆಚ್ಚುಗಟ್ಟಲೆಗೆ ಕಾನ್ಫರೆನ್ಸ್ ಕರೆಯುತ್ತೇನೆ. ಕೋರಂ ಇದೆಯೆ ಇಲ್ಲವೆ ನೋಡುತ್ತೇನೆ. ವಿಷಯವನ್ನು ಚರ್ಚೆಗೆ ತರುತ್ತೇನೆ. ಆ ಮೇಲೆ ಓಟಿಗೆ ಹಾಕುತ್ತೇನೆ. ಪ್ರಜಾಪ್ರಭುತ್ವ ನೀತಿಗನುಗುಣವಾಗಿ ಬಹು ಮತದಿಂದ ತೀರ್ಮಾನಿಸಿ ನಿರ್ಣಯಮಾಡುತ್ತೇನೆ!

ಮೊನ್ನೆ ಮುಂದಿನ ತಿಂಗಳ ಬಡ್ಜೆಟ್ ತಯಾರಿಸಿ ನನ್ನ ಸಂಸಾರದ ಸದಸ್ಯರ ಮುಂದಿಟ್ಟೆ. ಕಾಫಿ ಖರ್ಚಿನಲ್ಲಿ ಶೇಕಡ 25 ಭಾಗ ಖೋತಮಾಡಿ ಬಡ್ಜೆಟ್ ಸರಿತೂಗಿಸಿದ್ದೆ. "ಕಾಫಿಯಲ್ಲಿ ಒಂದು ತರಹ ವಿಷವಿದೆ. ಅದರಿಂದ ನಮ್ಮ ಆರೋಗ್ಯ ಕೆಡುತ್ತೆ" ಎಂದು ನಾನು ಒಂದು ಪುಟ್ಟ ಭಾಷಣ ಮಾಡಿದೆ. ಬಡ್ಜೆಟ್ ಮೇಲೆ ಬಿಸಿಬಿಸಿ ಚರ್ಚೆ ನಡೆಯಿತು. "ಕಾಫಿಯಲ್ಲಿ ವಿಷವಿದೆ" ಎಂದು ಹೇಳುವವನು ಶುದ್ಧ ಒರಟ, ಅನಾಗರೀಕ, ವಂಚಕ, ನನ್ನ ಅಭಿಪ್ರಾಯವನ್ನು ರೆಕಾರ್ಡ್ ಮಾಡಿ"—ಎಂದು ಕೂಗಿ ನನ್ನ ಅರ್ಧಾಂಗಿ ಅಡಿಗೆ ಮನೆಯಿಂದ ವರಾಂಡಕ್ಕೆ ವಾಕ್‌ಔಟ್ ಮಾಡಿದಳು! ಕೆಲವರು ಅವಳನ್ನು ಹಿಂಬಾಲಿಸಿದರು, ಹೇಳಿಕೆ, ಪತ್ರಿಕೆ, ವರದಿ, ನಿಯೋಗ, ಸಮಿತಿ, ವಿಚಾರಣೆ ಅಂತ ಒದರಿಕೊಂಡು! ಮಹಾಲಯದ ದಿನ ಮನೆಯಲ್ಲಿ ಪರಿಸ್ಥಿತಿ ಇನ್ನೂ ಬಿಗಡಾಯಿಸಿಕೊಂಡಿತ್ತು. ವಿರೋಧಪಕ್ಷದ ಪಿತೂರಿ ಬಹಳ ಬಲವಾಗಿ ಪಕ್ಷದ ಪಿತೃಶೇಷ ಅಷ್ಟು ರುಚಿಯಾಗಿರಲಿಲ್ಲ!

—ಹಾ. ರಾ.



ಮುಂಬರುವ ದಿನಗಳಲ್ಲಿ—

ಹಿತ್ತಲ ಗಿಡ


"ನಾನು ಕಂಡ ಹಾಗೆ, ಇಷ್ಟುದ್ದದ ಹುಡುಗನಾಗಿದ್ದ; ಈಗ ನನ್ನ ಮನೆ ಮುಂದೇನೇ ಕಾರಲ್ಲಿ ಹೋಗ್ತಿದಾನೆ, ನನ್ನ ಕಣ್ಣಿಗೆ ಮಣ್ಣೆರಚುತ್ತಾ, ಘಟಿಂಗ" ಎಂದೊಬ್ಬರು ಮೊನ್ನೆ ಗೊಣಗಿದರು. ಆದಕ್ಕೆ ನಾನು ಹೇಳಿದೆ, ''ಹೊಟ್ಟೆ ಕಿವುಚಿಕೊಳ್ಳಬೇಡಿ, ಸ್ವಾಮಿ! ಸಂತೋಷಪಡಿ. ಹುಡುಗ ಬೆಳೆದನಲ್ಲಾ, ನಾಲ್ಕು ಜನರ ಮೆಚ್ಚುಗೆ ಪಡೆದನಲ್ಲಾ. ಹೆಚ್ಚು ಕಾರ್ಯ ತತ್ಪರತೆಯಿಂದ ಎಂಟು ದಿಕ್ಕುಗಳಿಗೂ ಓಡಾಡಲು ಸಹಾಯವಾಗುವಂತೆ ಅವನಿಗೆ ಒಂದು ಕಾರು ಸಿಕ್ಕಿತಲ್ಲಾ ಎಂದು ಹಿಗ್ಗೋದು ಬಿಟ್ಟು, ನೀವು......?" ನನ್ನ ಮಾತು ಅವರಿಗೆ ರುಚಿಸಲಿಲ್ಲ.

''ನನ್ನ ಸ್ಕೂಲಲ್ಲಿ ಓದುತ್ತಿದ್ದಾಗ, ಮಗ್ಗಿ ಹೇಳೋಕೆ ಮುಗ್ಗರಿಸುವನು; ಕಿವಿ ಹಿಡಿದು ಎಷ್ಟು ನುಲಿದಿದೇನೋ! ಈಗ, ಅದೇ ಮಂಕ, ಇಕೊ! ಧುರ್ರಂತ ಸಿಗರೇಟ್ ಸೇದುತ್ತಾ ನಮ್ಮೂರಲ್ಲೇ ಮೆರೆಯುತ್ತಿದಾನೆ'' ಎಂದು ರೇಗಿದರು, ಮೇಷ್ಟರೊಬ್ಬರು, ಕಣ್ಣು ಕೆಂಚಗೆ ಮಾಡುತ್ತ. ''ನಾನೂ ಅವನೂ ಒಂದೇ ಕ್ಲಾಸಿನಲ್ಲಿ ಓದುತ್ತಿದ್ದೆವು; ಈಗ...... ಭಗವಂತನಿಗೆ ಕರುಣೆಯೇ ಇಲ್ಲ....... ಅವನಲ್ಲಿ, ನಾನಿಲ್ಲಿ'' ಎಂದು ಹಣೆಯ ಮೇಲೆ ಕೈ ಇರಿಸಿದ, ಮತ್ತೊಬ್ಬ, ''ನಮ್ಮೂರು ಹೆಣ್ಣನ್ನೇ ಲಗ್ನವಾಗಿದಾನೆ; ಆದರೂ, ಅವನ ಜಂಭ ನೋಡು. ಮೊನ್ನೆ ಆ ಮಹಾಸಭೆ ನಡೆದಾಗ, ನಾನು ಎಲ್ಲೋ ದೂರದಲ್ಲಿ ನಿಂತಿದ್ದೆ. ಹತ್ತಿರ ಬಿಡಲೇ ಇಲ್ಲ, ಹಾಳು ಜನ. ಅಂಚಲ್ಲೇ ನಿಂತು ಹಲ್ಲು ಕಿರಿದೆ; ಆದರೆ, ಗೆಣೆಯ ತಿರುಗಿ ನೋಡಲೇ ಇಲ್ಲ'' ಅಂತಾನೆ ಬೇರೊಬ್ಬ.

ಎಲ್ಲಿಂದಲೋ ಇಳಿದುಬರುತ್ತಿದ್ದ ಪರಂಗಿಯವರಾದರೆ ಅವರ ಪೂರ್ವೋತ್ತರಗಳು ನಮಗೆ ಏನೂ ತಿಳಿದಿರುತ್ತಿರಲಿಲ್ಲ. ಆದ್ದರಿಂದ, ತೆಪ್ಪಗೆ ಅವರಿಗೆ ಗೌರವ ಸಲ್ಲಿಸಿ, ಕೈಕಟ್ಟಿ, ಬಾಯಿ ಮುಚ್ಚಿ ಭಯಭರಿತರಾಗಿ ನಿಲ್ಲುತ್ತಿದ್ದೆವು. ಅವರು ಅತ್ತಲಗಿಡ; ಇವರು ಹಿತ್ತಲಗಿಡ. ಈಗ ಅಧಿಕಾರದಲ್ಲಿರುವವರೆಲ್ಲರೂ ನಮ್ಮವರೇ. ಆದ್ದರಿಂದಲೇ, ಟೀಕೆ ಟಿಪ್ಪಣಿ ಹೆಚ್ಚಿರುವುದು. ''ನಮ್ಮ ಹಳ್ಳಿಯವನು ನನಗೆ ಗೊತ್ತಿಲ್ಲವೆ ನಮ್ಮ ಹಳ್ಳಿ ಯೋಗ್ಯತೆ. ನನ್ನ ಮುಂದೆ ಇವನ ಬೇಳೆ ಬೇಯುವುದು ಹೇಗೆ?'' ಎಂದೊಬ್ಬರು ಭುಜ ಕುಣಿಸುವರು. ''ನನಗಿಂತ ಕಪ್ಪು ಆಸಾಮಿ; ನನ್ನಷ್ಟು ಕೂಡ ಎತ್ತರ ಇಲ್ಲ; ನಾನು ಇಂಟರ್ ಪಾಸು ಮಾಡಿದ

ವರ್ಷ ಇವನು ಬಿ. ಎ.ಲಿ ಫೆಯಿಲಾದ ......ನನ್ನನ್ನೇ ಕೇಳೋಣ ಅಂತಿದ್ದರು, ಇವನಿಗೆ ಕೊಟ್ಟ್ಯಾಗ........ಕೇಳಿಬಿಟ್ಟಿದ್ದರೆ, ನಾನೇ ಈಗ ಅವನ ಸ್ಥಾನದಲ್ಲಿರುತ್ತಿದ್ದೆ" ಇಂಥ ವ್ಯಾಖ್ಯಾನ ಸರ್ವಸಾಮಾನ್ಯ. ನಾನೂ ಅವನೂ ಒಂದೇ ಮಡಕೆಯಲ್ಲಿ ಅಂಬಲಿ ಕುಡಿದಿದೇವೆ; ಒಂದೇ ಬೆತ್ತದಿಂದ ಏಟು ತಿಂದಿದೇವೆ ; ಒಂದೇ ತಗಣೆಯಿಂದ ಕಚ್ಚಿಸಿಕೊಂಡಿದೇವೆ. ಅಂಥದ್ದರಲ್ಲಿ, ಈಗ ಅವನು ನನ್ನ ಕೋರಿಕೆಯನ್ನ ಈಡೇರಿಸುವುದಿಲ್ಲವಲ್ಲಾ'' ಎಂಬ ರೇಗಾಟ ಬಹಳ. "ನಾನೇ ನಾದರೂ. ಅವನಾಗಿದ್ದಿದ್ದರೆ, ಎಂಬ ಜಂಬದ ಮಾತು ಹೇರಳ. ಆದರೆ, ಆಗ, ಅವನು ಈಗಿನ ನಾನಾಗಿ, ಇಷ್ಟೇ ಬಿರುಸಿನಿಂದ ಟೀಕಿಸುವನು ಎಂಬುದನ್ನ ಮಾತ್ರ ನಾವು ಮರೆಯುವಂತಿಲ್ಲ.

—ಕಾಮತ್.



ವನಮಹೋತ್ಸವ ಮಾಡಿದಕ್ಕೆ ಒನಕೇನೂ ಚಿಗರ್ತಲ್ಲೇ !

ಶ್ರೀಮಾನ್ ಸಂಪಾದಕರಿಗೆ—

ಪ್ರಿಯ ಸಂಪಾದಕರೇ,

ಹಣ್ಣು ಹಣ್ಣು ಮುದುಕರೊಬ್ಬರು 'ಧಾತು-ಈಶ್ವರ ಕ್ಷಾಮದಲ್ಲಿ ಯಾರಿಗೆ ಕೊಡದೇ ತಿಂದ್ವೋ ಆ ಹುಣಿಸೇ ಬೀಜಾನ, ಈಗ ಪಡ್ತಿದ್ದೀವೆ ಅದರ ಪಾಡ್ನ. ದೋಸೇ ತಿರುವಿಹಾಕಿದಹಾಗೆ, ಎಂದರು ಈಗಿನ Ration ಕಂಡು. ಇರಬಹುದು! ಹಿಂದಿನ ಕಾಲದಲ್ಲಿ ಇಂಡಿಯಾ ದೇಶ ವೈಭವದ ಸುಖ ಸಂಪತ್ತಾಗಿತ್ತು. ಸುಖದುಃಖಗಳು ಚಕ್ರಾರ ಪಂಕ್ತಿಯಂತೆ....ವೈಭವದ ಸುಖ ಹೋಗಿ ದುಃಖದ ವೈಭವ ತೂಗುಯ್ಯಾಲೆಯಾಡುತ್ತಿದೆ ನಮ್ಮ ನಮ್ಮಲ್ಲಿ.

'ಊಟವಾಯ್ತೆ' ಅನ್ನುವ ಪ್ರಶ್ನೆಗೆ ಆ ಹಣ್ಣು ಮುದುಕರ ಮಗ ಹೇಳಿದ ಈ ಉತ್ತರ. ಅದನ್ನು ಅವನು ಕೊಟ್ಟ ಹಾಗೆ ನಿಮ್ಮ ಮುಂದೆಯಿಟ್ಟಿದ್ದೇನೆ, ತಮ್ಮ ಪತ್ರಿಕೆಯಲ್ಲಿ ಪ್ರಕಟಣೆಗಾಗಿ.

ಗೌರೀನಿಲಯ
ಕೆಂಪಾಪುರ ಅಗ್ರಹಾರ
ಬೆಂಗಳೂರು

ಇತಿ ತಮ್ಮ ವಿಶ್ವಾಸಿ,
ಶೋ. ಸ್ವಾ.

ಊಟವಾಯ್ತೆ—

"ಏನಯ್ಯಾ ಊಟವಾಯ್ತೇ?"

"ಆ್ಞ! ಏನಂದೆ....ಊಟವಾಯ್ತೇ....ಊಟ ಮಾಡಿದ್ರೇ ಮಾಡ್ತೀನಿ ಇಲ್ದಿದ್ರೆ ಇಲ್ಲ. ನಿನಗ್ಯಾಕೆ ಅವೆಲ್ಲ. ನಿಮ್ಮಪ್ಪನ್ಮನೇ ಗಂಟೇನಾದ್ರು ತಿಂಗ್ನೇ.... ಇಲ್ದಿದ್ರೆ ಹೊಡಕೊಂಡು ಬಂದ್ಬಿಟ್ನೇ....ಅಲ್ಲ ಕೇಳೋದ್ನೋಡು....ನಿನ್ನ ಹೆಂಡತಿ ಮಾಡಿಹಾಕಬೇಕೇ....ಇಲ್ವೆ ಸಂಪಾದಿಸಿಹಾಕಬೇಕೇ....ನನ್ಮನೇಲ್ಲಿ ಸಾವಿರ ತಾಪತ್ರಯಇರುತ್ತೆ ನಿನಗ್ಯಾಕೆ ಅವೆಲ್ಲ. ನನಗ್ಬರೋ ನಲವತ್ರುಪಾಯ್ನಲ್ಲಿ ತಿನ್ನೋದಿಕ್ಕೆ ೫-೬ ಜನ....ತಿಂಗಳಿಗೆ ೨೫ ಏಕಾದಶೀ ಮಾಡ್ತೀನಿ—Miss 10 Meals a week ಮಾಡ್ತೀನಿ....ನಿನಗ್ಯಾಕೆ ಅವೆಲ್ಲ....ನಿನ್ಹೊಟ್ಟೇ ತುಂಬಿದ್ರೇ—ನಿನಗೂಟವಾದ್ರೇ ಎಲ್ಲಾರ್ಗೂ ಆಗುತ್ಯೇನು, ನಿನಗಾಯ್ತು.... ನಿನಗ್ಬರೋ ಇನ್ನೂರು ರುಪಾಯಿ....ತಿನ್ನೋದಿಕ್ಕೆ ಇರೋದು ಎರಡು ಬಾಯಿ.... ಚನ್ನಾಗಿ ತಿಂದು ನಮ್ಮನ್ನೆಲ್ಲಾ ಹಾಸ್ಯಮಾಡೋದು....ಈಗಿನ್ರೇಷನ್ ಕಾಲ್ದಲ್ಲಿ ಅವರ್ಕೊಡೋ $\frac{1}{2}$ ಪಾವು ಅಕ್ಕೀನ ಯಾರ ಹೊಟ್ಟೇಗ್ಸಾಕ್ಲೇ....ಘಂಟೇಗಳು ಕಾದ್ಕೊಂಡಿದ್ದು ರೇಷನ್ ತರೋ ಹೊತ್ತಿಗೆ ಊಟದ್ಹೊತ್ತು ಆಗಿಹೋಗಿರುತ್ತೆ... ತೆಪ್ಪನೇ ಹೊರಟು ಬಿಡ್ತೀನಿ........"

" ಅಲ್ವಯ್ಯ......."

"ಛ್ಚಾ ! ತ್ಯುತ್ !! ತಿರಗ್ಮಾತಾಡ್ತೀಯಾ....ನಾಚಿಕೇ ಆಗೊಲ್ವೇ.... ನಿನ್ಮನೇ ನಿನಗೆ....ನನ್ಮನೇ ನನಗೆ ......"

ಅಷ್ಟರಲ್ಲಿ ಕೇಳಿದವನು ಅಲ್ಲಿ ನಿಲ್ಲಲೇ ಇಲ್ಲ"

——o——



ಏನು ರಿಡಿಕ್ಯುಲಸ್ ಸಾರ್. ನಿಮ್ಮ ಕಡೆ ಜನ
ಮರಾಠಿ ಮಿಕ್ಸ್ ಮಾಡಿ ಕನ್ನಡಾನ ಕುಲಗೆಡಿಸ್ತಾರೆ !

ಡಯರಿ

೧೯೫೧......ಯಾರದೋ ಲೆಕ್ಕದ ಪ್ರಕಾರ, ಹೊಸ ವರ್ಷ ಕ್ರೈಸ್ತ ಜನಾಂಗಕ್ಕೆ ಸೇರಿದ ಇಂಗ್ಲೀಷರು ನಮ್ಮನ್ನು ಗೆದ್ದು, ನಮ್ಮ ಮೇಲೆ ೧೫೦ ವರ್ಷಗಳ ಕಾಲ ರಾಜ್ಯಭಾರಮಾಡಿದ್ದರಿಂದ, ನಮಗೂ ಹೊಸವರ್ಷ.

ಆದರೆ, ಯಾತಕ್ಕಾಗಿ ಈ ಹೊಸ ವರ್ಷ? ಶಾಲಾ ಕಾಲೇಜುಗಳಿಗೆ ಹೊಸ ವರ್ಷ ಜೂನ್ ೮ ಅಥವಾ ಜೂನ್ ೨೪ ರಿಂದ ಪ್ರಾರಂಭ. ಸರ್ಕಾರಿ ಲೆಕ್ಕ ಪತ್ರಗಳಿಗೆಲ್ಲ ಹೊಸ ವರ್ಷ, ಏಪ್ರಿಲ್ ಒಂದನೇ ತಾರೀಖಿನಿಂದ. ಯಾರಿಗಾಗಿ ಈ ಹೊಸ ವರ್ಷ? ಮಲೆಯಾಳಿಗಳ ಹೊಸ ವರ್ಷ ಸಿಂಹ ಮಾಸದ ಸಂಕ್ರಮಣದಿಂದ, ತಮಿಳರಿಗೆ ಹೊಸ ವರ್ಷ ಮೇಷ ಸಂಕ್ರಮಣದಿಂದ, ಗುಜರಾತಿಗಳಿಗೆ ದೀಪಾವಳಿ ಹಬ್ಬದಿಂದ, ಮುಸಲ್ಮಾನರಿಗೆ ಬೇರಾವುದೋ ಹಬ್ಬದಿಂದ, ಕನ್ನಡ-ತೆಲುಗು ನಾಡುಗಳಿಗೆ ಯುಗಾದಿ ಹಬ್ಬದಿಂದ.

ಆದರೂ, ಜನವರಿ ಒಂದನೇ ತಾ|| ನಿಂದ, ನಾವೂ, ಬೆಪ್ಪರಂತೆ, ಸೋತ ಎತ್ತಿನ ಬಾಲ ಹಿಡಿದವರಂತೆ, ಹೊಸ ವರ್ಷ ಎನ್ನುತ್ತೇವೆ; ಗ್ರೀಟಿಂಗ್ಸ್ ಹಂಚುತ್ತೇವೆ; ಕ್ಯಾಲಂಡರುಗಳನ್ನು ಸಂಪಾದಿಸಿ ಗೋಡೆ ಸುತ್ತ ಮೊಳೆ ಹೊಡೆದು ಅವಲಕ್ಷಣ ಮಾಡಿಕೊಳ್ಳುತ್ತೇವೆ. ಡಯರಿಗಳನ್ನು ಕೊಂಡು ತಂದು, ತುಂಬಲು ಯತ್ನಿಸುತ್ತೇವೆ. ಕುವೆಂಪು ಕೇಳಿದಹಾಗೆ, "ಹುಚ್ಚಿಗಿದು ಬೇರೊಂದು ಹೆಸರಲ್ಲವೆ?"

ಡಯರಿಗಳು ಹಲವಾರು ವಿಧ. ದಿನಕ್ಕೊಂದು ಪುಟದ್ದಾದರೆ, ಬಲುದಪ್ಪ. ಕಿಸೆಯೊಳಗಡಗುವುದಿಲ್ಲ. ಕೆಲವು ಡಯರಿಗಳು ಭಿಕ್ಷುಕರಿಗೆ ತುಂಬಾ ಅನುಕೂಲ, ತಿರುಕರಿಗಾಗಿಯೇ ತಯಾರಾದವು. ಏಕೆಂದರೆ, ಅವುಗಳನ್ನು ನೋಡಿಕೊಂಡು ಅವರು ತಮ್ಮ ಪ್ರಯಾಣ ಮಾರ್ಗವನ್ನೂ ಪ್ರವಾಸ ಕಾಲವನ್ನೂ ನಿರ್ಧರಿಸಿ ಆದಷ್ಟು ಸಂಪಾದನೆ ಮಾಡಿಕೊಳ್ಳಬಹುದಾಗಿದೆ. ಪುರಂದರದಾಸರ ಪುಣ್ಯ ದಿನದಿಂದ ಅವರನ್ನು ತ್ರಿಕರಣ ಪೂರ್ವಕ ನೆನೆದು, ಶ್ರೀರಂಗಪಟ್ಟಣದಲ್ಲಿ 'ಕಾವೇರಿಯಲಿ ಮಿಂದು' ರಂಗನಾಥಸ್ವಾಮಿ ರಥದ ದಿನ ಪುಡಿಕಾಸು ಶೇಖರಿಸಿ, ಮುಡುಕುತೊರೆ ಮಲ್ಲಿಕಾರ್ಜುನ ಸ್ವಾಮಿ ರಥ ಪೂರೈಸಿ, ಸತ್ಯಾಗಾಲದ ವಿಶ್ವೇಶ್ವರ ಸ್ವಾಮಿ

ರಥಕ್ಕೆ ಹೋಗಿ ಗಂಟುಮಾಡಿಕೊಂಡು ಕೊಳ್ಳೇಗಾಲಕ್ಕೇ, ಲಕ್ಷ್ಮೀನಾರಾಯಣ ರಥದ ಹೊತ್ತಿಗೆ ಹೋಗಿ, ಚಿಲ್ಲರೆ ಸಂಪಾದಿಸಿ, ಮಾದೇಶ್ವರ ಬೆಟ್ಟದ ಜಾತ್ರೆಗೆ ಹೋಗುವ ಯಾತ್ರಿಕರನ್ನು ಸುಲಿದು, ಹೇಮಗಿರಿ ಕಡೆ ತಿರುಗಿ, ಅಲ್ಲಿಯ ರಥ ಮುಗಿಸಿ. ಅಕ್ಕಿ ಹೆಬ್ಬಾಳಿಗೆ ಹಾದು, ಶಾಂತಿ ಗ್ರಾಮಕ್ಕೆ ನಡೆದು ಅಲ್ಲಿನ ಸೌಮ್ಯ ಕೇಶವನಾಥನ ರಥಕ್ಕೆ ಸೇರುವ ಜನಸಂದಣಿಯೆದುರು ಕೈ ನೀಡಿ, ಮಾಗಡಿ ಸೋಮೇಶ್ವರ ರಥ ಉತ್ತನಹಳ್ಳಿ ಜಾತ್ರೆ ಎರಡನ್ನೂ ಜಾಲಾಡಿ, ಕಾಟ್ಟೂರಮ್ಮ ನವರ ಜಾತ್ರೆಯಲ್ಲಿ ಬಂದದ್ದನ್ನೂ ಗಳಿಸಿ, ಕೃಷ್ಣಾಪುರದಾರಿಯಲ್ಲಿ ತೊಂಡನೂರು ರಥದ ಟೈಮಿಗೆ ಸರಿಯಾಗಿ ಅಲ್ಲಿಗೆ ನುಗ್ಗಿದರೆ, ಮೇಲುಕೋಟೆ ವೈರಮುಡಿ ಹೊತ್ತಿಗೆ ಸರಿಯಾಗಿ ನೂರಿನ್ನೂರು ಗಳಿಸಬಹುದೆಂದು ಡಯರಿಯಿಂದ ಪತ್ತೆ ಯಾಗುತ್ತದೆ.

ಡಯರಿಯಿಂದ ರೈಲು ಪ್ರಯಾಣ ಕಾಲ ಖರ್ಚು ಗೊತ್ತಾಗುತ್ತದೆ, ಎಂದು ತಿಳಿಯುವುದು ತಿಳಿಗೇಡಿತನ ಏಕೆಂದರೆ, ಏಪ್ರಿಲ್ ಹೊತ್ತಿಗೆ, ಅವೆರ ಡನ್ನೂ ಸರ್ಕಾರದವರು ಬದಲಾಯಿಸುತ್ತಾರೆ. ಅಲ್ಲಿಂದಾಚೆಗೆ, ಡಯರಿಯನ್ನು ನಂಬಿಹೊರಟರೆ, ಪ್ರಯಾಣಕ್ಕೇ ಪೆಂಗ್ನಾಮ, ಟಪಾಲು ಚಾರ್ಜುಗಳಿಂದಲೂ ಗಳಿಗೆಗಳಿಗೆಗೂ ಬದಲಾಗುತ್ತಿರುವ ಇವತ್ತಿನಕಿದ್ವಾಯಿ ರಾಜ್ಯದಲ್ಲಿ ಏನೂ ಫಲವಿಲ್ಲ.

ಡಯರಿಯಲ್ಲಿ ನಾವು ವಾರ ವಾರವೂ ಮಾಡಬೇಕಾಗಿರುವ ಕಾರ್ಯಕ್ರಮ ಗಳನ್ನು ಬರೆದಿಡಬಹುದಲ್ಲಾ, ಜ್ಞಾಪಕಾರ್ಥವಾಗಿ? ನಶ್ವರವಾದ ಈ ಪ್ರಪಂಚ ದಲ್ಲಿ, ನೀರಿನ ಮೇಲಿನ ಗುಳ್ಳೆಯಂತಿರುವ ಈ ಸಂಸಾರದಲ್ಲಿ, ನಾಳೆ ಎಂದರೇನು? ಎಂಗೇಜ್‌ಮೆಂಟ್ ಅಂದ್ರೇನು? ಅಹನ್ಯಹನಿ ಕಾಲಕ್ಷೇಪ ಮಾಡುತ್ತಿರುವ ನಮ್ಮಂಥವರಿಗೆ, "ನಾಳೆ ಬರುವುದು ನಮಗಿಂದೇ ಬರಲಿ." ಮುಂದಿನ ತಿಂಗಳ ಮೂರನೆಯ ತಾರೀಖು ಇಂಥದ್ದನ್ನು ಮಾಡುತ್ತೇನೆ, ಎಂದು ಸಂಕಲ್ಪ ಮಾಡು ವುದೂ, ಹಾಗೆ ಡಯರಿಯಲ್ಲಿ ಬರೆದಿಡುವುದೂ, ಎರಡೂ ದೇವ ದ್ರೋಹ; ವೇದಾಂತ ವಿರೋಧ; ವಿಧಿಯನ್ನು ಮೂಢರು ಮೂದಲಿಸುವ ಪರಿ.

ಹಾಗಾದರೆ, ಡಯರಿಯನ್ನು ನಾವು ಕೊಂಡು ಕೊಳ್ಳುವುದು ತಾನೆ ಏಕೆ? ಒಂದೇ ಒಂದು ಕಾರಣದಿಂದ, ಅಷ್ಟೆ. ಡಯರಿ ಮಾರಾಟಗಾರರ ಮಾಟಕ್ಕೆ ನಾವು ಮರುಳಾಗುವುದರಿಂದ.

— ನಾ. ಕಸ್ತೂರಿ.

———o———

ಕಂಬಳಿ, ರಗ್ಗು,

ಶಾಲುಗಳಿಗೆ

ಬಾಹುಸಾರ್ ಕಂಪೆನಿ, ಬ್ಯಾಂಕ್ ರೋಡ್, ಮೈಸೂರು.

★—★

(ಮಲೇರಿಯಾಹಾರಿ ಸೊಳ್ಳೆ ಪರದೆಗಳಿಗೆ
ಹೆಸರುವಾಸಿಯಾದ ಅಂಗಡಿ)

KORAVANJI

A Quasi Literary Humorous Monthly in Kannada

ADVERTISEMENT TARIFF

CONTRACT

(For 12 Full Page Insertions to be Covered within 14 months from the Date of First Insertion)

Cover—Last Page	...	Rs. 50	per insertion
2nd or 3rd Page	...	Rs. 40	,,
Inside—*Advertisement Section :*			
Full Page	...	Rs. 25	,,
Half Page	...	Rs. 15	,,
Opposite Reading Matter :			
Full Page	...	Rs. 40	,,
Centre Pages :—Double Page	...	Rs. 100	,,

Casual Insertions :—25 per cent extra

Advertisements in Colour—Rates on Application.

SPECIAL NUMBERS EXTRA.

Address enquires to ;—**The Advertisement Manager,**
KORAVANJI,
BALEPET, BANGALORE 2

29-12-50 ರಿಂದ 3ನೇ ವಾರ

ಪ್ರದರ್ಶಿತವಾಗುತ್ತಿದೆ

ಬೆಂಗಳೂರು **ಪ್ರಭಾತ್** ಚಿತ್ರಮಂದಿರದಲ್ಲಿ

ಫಿಲಂಕಾರ್‌ರವರ

CHHOTI ★★ ಛೋಟಿ ಭಾಬಿ ★★ BHABI

ನರ್ಗಿಸ್, ಕರನ್ ದಿವಾನ್, ಶ್ಯಾಮ್, ಕುಲ್‌ದೀಪ್
ಮತ್ತು ಯಾಕೂಬ್.

ಪ್ರಗತಿಪರ : ಸಂಸಾರಿಕ, ಸಾಮಾಜಿಕ

ಸಂಗೀತ : ಹುಸ್ನಲಾಲ್ ಭಗತ್‌ರಾಮ್.

ಶೀಘ್ರದಲ್ಲಿಯೇ ಮೈಸೂರು **ಪ್ರಭಾ** ಪಿಕ್ಚರ್ ಹೌಸ್‌ನಲ್ಲಿ

★★

A Rajshri Release.

ಜೀವ ವಿಮೆ

ಗಂಡನ ಕರ್ತವ್ಯವೂ
ಹೆಂಡತಿಯ ಹಕ್ಕೂ
ಮಗುವಿನ ಅವಶ್ಯಕತೆಯೂ

ಆಗಿದೆ

ಮೈಸೂರು ಸರ್ಕಾರದ
- ವಿಮಾ ಇಲಾಖೆ -

ಮೂವತ್ತುಮೂರು ವರುಷಗಳ
ನಂಬಿಕೆ, ಸೇವೆ, ಸಹಕಾರ

ಸಲ್ಲಿಸಿದೆ

★

ಪೂರ್ಣ ಭದ್ರತೆ--ತೀರ ಕಡಿಮೆ ವೆಚ್ಚ, ಇಡೀ ಭಾರತದಲ್ಲಿ ಅತ್ಯಧಿಕ ಬೋನಸ್ಸು ಹಂಚಿರುವುದು ! ಸಾಲಿಯಾನ ಸಾವಿರಕ್ಕೆ ಹದಿನೆಂಟು ರೂಪಾಯಿ, ಅತ್ಯನುಕೂಲವಾದ ಪ್ರೀಮಿಯಂ ದರ—ಸುಲಭವಾದ ಸಾಲದ ಸೌಕರ್ಯ, ತಡವಿಲ್ಲದ ವಿಮಾ
- - - - ಮೊಬಲಗಿನ ಪಾವತಿ - - - -

★

ಪ್ರಜೆಗಳ ಶಾಖೆಯಲ್ಲಿ ವಿಮೆ ಮಾಡಲು ಇಂದೇ
ನಿರ್ಧರಿಸಿ

★

ಮೈಸೂರು ಸರ್ಕಾರದ ವಿಮಾ ಇಲಾಖೆ,
ಬೆಂಗಳೂರು

Printed by B. S. Iyengar, Bangalore City
Publisher—B. N. Gupta. Editor—M. Sivaram.